75

ದೇವರ ಸಾಮ್ರಾಜ್ಯದಲ್ಲಿ

ಮತ್ತು ಇತರ ಕಥೆಗಳು

(ಟೊಲ್‌ಸ್ಟೊಯಿಯ ಕಥೆಗಳ
ಅನುವಾದ.)

ಅನುವಾದಕರು:

ಶ್ರೀ| ಎಸ್. ಎನ್. ನವಕಾನ,

ಎಮ್. ಎ., ಬಿ. ಟಿ.,

ಪೆರಡಾಲ.

1956.

ಒಂದಾಣೆ ಮಾಲೆ

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. *ಚುನಾವಣೆ ಅರ್ಥಾತ್ ಬನಾವಣೆ
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು'
೮. *ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. *ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ)
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. *ತಿರುಕ್ಕುರಲ್
೨೩. ಸೂರ್ಯನ ಸಂಸಾರ
೨೪. *ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಜಿ (ಏಕಾಂಕ ಪ್ರಹಸನ)
೨೯. ಚಾಣಕ್ಯಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಅಳುವಿನ ಹೊಳೆ ಮತ್ತು ಕೇಶವಭೂಪ
೩೫. ಶರಾಬಿನ ಪೀಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರರ ಚಮತ್ಕಾರ
೩೯. ಸತೀ ಸಾವಿತ್ರಿ [ಕಥೆಗಳ
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ
೪೫. ಸುಭಾಷಿತ [ಕಥೆಗಳ
೪೬. ೧೮೫೭ರ "ಸಿಪಾಯಿ ದಂಗೆ"
೪೭. ಅಕಾಂಡ ತಾಂಡವ (ರೇಡಿಯೋ ನಾಟಕ
೪೮. ಸಾಹಸದ ಕಥೆಗಳು.
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟಿಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟಬಿಟ್ಟಧಿಟ್ಟ (ಏಕಾಂಕ ಪ್ರಹಸನ)
೬೦. ನಿರಪರಾಧಿ
೬೧. ಭಕ್ತವಾಣಿ
೬೨. ಜಾನಪದ ಸಾಹಿತ್ಯ
೬೩. ಡಾಕ್ಟರ್ ಆರೋಗ್ಯಮ್
೬೪. ಲೌಕಿಕ ನ್ಯಾಯಗಳು
೬೫. ಶಿಶುಪಾಲ ಮಾನಭಂಗ
೬೬. ಜರಾಸಂಧ ವಧೆ
೬೭. ಜವಾಹರಲಾಲರ ಜೀವನ ಚರಿತ್ರೆ
೬೮. ಕರುಣೆ ಮತ್ತು ಇತರ ಕಥೆಗಳು
೬೯. ಶ್ರೀಕ್ಷೇತ್ರ ಉಡುಪಿ
೭೦. ವಿನೋದ ವಿಹಾರ
೭೧ ಭಾರತದ ಗತವೈಭವ
೭೨. ಸತ್ಯ ಹರಿಶ್ಚಂದ್ರ
೭೩. ಸೂಕ್ತಿಗಳು.
೭೪ ಉ. ಕ. ದ ಯಕ್ಷಗಾನ ಕಲಾವಿದರು
೭೫. ದೇವರ ಸಾಮ್ರಾಜ್ಯದಲ್ಲಿ...

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ದೇವರ ಸಾಮ್ರಾಜ್ಯದಲ್ಲಿ

ಮತ್ತು ಇತರ ಕಥೆಗಳು

---

೧. ದೇವರ ಸಾಮ್ರಾಜ್ಯದಲ್ಲಿ

ಒಂದು ದಿನ ಕೆಲವು ಮಕ್ಕಳು ಒಂದು ಕಣಿವೆಯಲ್ಲಿ ಆಡುತ್ತಾ ಇರುವಾಗ ಒಂದು ಧಾನ್ಯದ ಕಾಳಿನಂತಿರುವ ವಸ್ತು ಸಿಕ್ಕಿತು. ಅದು ಗಾತ್ರದಲ್ಲಿ ಕೋಳಿಮೊಟ್ಟೆಯಷ್ಟು ದೊಡ್ಡದಿತ್ತು. ಅಲ್ಲೇ ಸಮೀಪ ಹೋಗುತ್ತಿದ್ದ ಪ್ರಯಾಣಿಕನೊಬ್ಬನು ಈ ವಿಚಿತ್ರ ವಸ್ತುವನ್ನು ಮಕ್ಕಳಿಂದ ಕ್ರಯಕ್ಕೆ ಪಡೆದುಕೊಂಡನು. ಅದನ್ನು ಪಟ್ಟಣಕ್ಕೆ ಕೊಂಡು ಹೋಗಿ ರಾಜನಿಗೆ ಮಾರಿದನು.

ರಾಜನು ತನ್ನ ವಿದ್ವಾಂಸರನ್ನೆಲ್ಲಾ ಕರೆಸಿ ಆ ವಿಚಿತ್ರ ವಸ್ತುವು ಏನಾಗಿರಬಹುದೆಂದು ಕಂಡುಹಿಡಿಯಲು ಹೇಳಿದನು. ಬುದ್ಧಿವಂತರು ಎಷ್ಟು ಆಲೋಚಿಸಿದರೂ ಅವರಿಗೆ ಆ ವಸ್ತು ಏನೆಂಬುದನ್ನು ಕಂಡುಹಿಡಿಯಲಾಗಲಿಲ್ಲ. ಒಂದು ದಿನ ಆ ವಸ್ತುವನ್ನು ಒಂದು ಕಿಟಕಿಯಲ್ಲಿಟ್ಟಿದ್ದರು. ಒಂದು ಹೇಂಟೆಯು ಬಂದು ಅದನ್ನು ತನ್ನ ಕೊಕ್ಕಿನಿಂದ ಕುಕ್ಕಿ ತೂತು ಮಾಡಿತು. ಆಗ ಅದೊಂದು ಧಾನ್ಯದ ಕಾಳೆಂಬುದು ಎಲ್ಲರಿಗೂ ತಿಳಿಯಿತು.

ಕೂಡಲೇ ಆ ಮೇಧಾವಿಗಳು ರಾಜನಲ್ಲಿಗೆ ಹೋಗಿ ಹೇಳಿದರು:—
"ರಾಜನೇ, ಅದೊಂದು ಧಾನ್ಯದ ಕಾಳು."

ಇದನ್ನು ಕೇಳಿ ರಾಜನಿಗೆ ಅತ್ಯಾಶ್ಚರ್ಯವಾಯಿತು. ತಕ್ಷಣ ಅಂಥ ಧಾನ್ಯವು ಎಲ್ಲಿ ಯಾವಾಗ ಬೆಳೆದಿತ್ತೆಂಬುದನ್ನು ಕಂಡುಹಿಡಿಯಲು ಆಜ್ಞಾಪಿಸಿದನು. ವಿದ್ವಾಂಸರು ತುಂಬಾ ಆಲೋಚಿಸಿದರು. ತಮ್ಮ ಪುಸ್ತಕಗಳ ಪುಟಗಳನ್ನೆಲ್ಲಾ ತಿರುವಿ ಹಾಕಿದರು ಆದರೆ ಅಂತಹ ಧಾನ್ಯದ ವಿಚಾರ ಎಲ್ಲಿಯೂ ಕಂಡು ಬರಲಿಲ್ಲ.

ಆಗ ವಿದ್ವಾಂಸರು ರಾಜನಲ್ಲಿಗೆ ಹೋಗಿ ವಿನಂತಿಸಿಕೊಂಡರು.

"ನಾವು ಈ ಸಮಸ್ಯೆಗೆ ಉತ್ತರ ಕೊಡಲಾರೆವು. ಇದರ ವಿಚಾರ ನಮ್ಮ ಪುಸ್ತಕಗಳಲ್ಲೆಲ್ಲಿಯೂ ಇಲ್ಲ. ಬಹುಶಃ ಕೆಲವು ಕೃಷಿಕರಿಗೆ ಇಷ್ಟು ದೊಡ್ಡದಾದ ಧಾನ್ಯ ಎಲ್ಲಿ ಯಾವಾಗ ಬೆಳೆದಿತ್ತೆಂಬ ವಿಚಾರ ತಮ್ಮ ಹಿರಿಯರಿಂದ ಕೇಳಿ ಗೊತ್ತಿರಬಹುದು. ಆದ್ದರಿಂದ ನೀವು ಕೃಷಿಕರನ್ನು ಕೇಳಿದರಾಗಬಹುದು."

ತನ್ನ ರಾಜ್ಯದಲ್ಲಿರುವ ಪ್ರಾಯಸ್ಥ ಕೃಷಿಕನನ್ನು ಹುಡುಕಿ ತರುವಂತೆ ರಾಜನು ಕೂಡಲೇ ಸೇವಕರನ್ನು ಆಜ್ಞಾಪಿಸಿದನು. ಸೇವಕರು ಅಂತಹ ಒಬ್ಬ ಕೃಷಿಕನನ್ನು ಕರೆದುಕೊಂಡು ಬಂದರು! ಆ ಮುದುಕನ ಬೆನ್ನು ಬಾಗಿತ್ತು. ಮೈಯೆಲ್ಲಾ ರಕ್ತಹೀನವಾಗಿ ಸುಕ್ಕುಗಟ್ಟಿ ಹೋಗಿತ್ತು. ಹಲ್ಲುಗಳೊಂದೂ ಇರಲಿಲ್ಲ. ಎರಡು ಊರುಗೋಲುಗಳ ಆಧಾರದಿಂದ ನಡುಗುತ್ತಾ ಕಷ್ಟದಿಂದ ರಾಜನ ಸಮೀಪಕ್ಕೆ ಬಂದನು.

ರಾಜನು ಆ ವಿಚಿತ್ರವಾದ ಕಾಳನ್ನು ಮುದುಕನಿಗೆ ತೋರಿಸಿದನು. ಮುದುಕನಿಗೆ ಕಣ್ಣುಗಳು ಕಾಣಿಸುತ್ತಿರಲಿಲ್ಲ. ಧಾನ್ಯವನ್ನು ಕೈಯಲ್ಲಿ ಹಿಡಿದು ಮುಟ್ಟಿನೋಡಿದನು. ಆಗ ರಾಜನು ಮುದುಕನನ್ನು ಕೇಳಿದನು: "ಎಲೈ ಮುದುಕನೇ, ಇಂತಹ ಧಾನ್ಯ ಎಲ್ಲಿ ಬೆಳೆಯುತ್ತಿತ್ತೆಂದು ಹೇಳಬಲ್ಲೆಯಾ? ನೀನು ಎಂದಾದರೂ ಇಂತಹ ಧಾನ್ಯಗಳನ್ನು ನೋಡಿದ್ದೆಯಾ ಅಥವಾ ನಿನ್ನ ಗದ್ದೆಗಳಲ್ಲಿ ಬೆಳೆಸಿರುವೆಯಾ?"

ಆ ಮುದುಕನಿಗೆ ಕಿವಿಕೇಳುತ್ತಿರಲಿಲ್ಲ. ಬಹಳ ಕಷ್ಟದಿಂದ ರಾಜನ ಪ್ರಶ್ನೆಗಳನ್ನು ಗ್ರಹಿಸಿಕೊಂಡನು. ಅನಂತರ ಮುದುಕನು ಹೀಗೆಂದನು: "ನಾನು ಇಂತಹ ಧಾನ್ಯವನ್ನೆಂದೂ ನೋಡಲಿಲ್ಲ. ನನ್ನ ಗದ್ದೆಗಳಲ್ಲಿ ಇಂತಹ ಧಾನ್ಯಗಳನ್ನು ಬಿತ್ತಲೂ ಇಲ್ಲ. ಕೊಯ್ಯಲೂ ಇಲ್ಲ. ಇಂತಹ ಕಾಳನ್ನು ಕ್ರಯಕ್ಕೆ ಪಡೆಯಲೂ ಇಲ್ಲ. ನನ್ನ ಕಾಲದಲ್ಲಿ ಧಾನ್ಯಗಳು ಇಂದಿನಂತೆ ಚಿಕ್ಕವುಗಳಾಗಿಯೇ ಇದ್ದವು. ಆದರೆ, ನೀನು ನನ್ನ ತಂದೆಯನ್ನು ಕೇಳಿದರೆ ಅವರಿಗೆ ಇದರ ವಿಚಾರ ತಿಳಿದಿರಬಹುದು."

ರಾಜನು ಮುದುಕನ ತಂದೆಯನ್ನು ಕರೆತರುವುದಕ್ಕೆ ಸೇವಕರನ್ನು ಕಳುಹಿಸಿದನು. ಕೂಡಲೇ ಮುದುಕನ ತಂದೆಯನ್ನು ಕರೆದುತಂದರು. ಅವನು ಒಂದೇ ಊರುಗೋಲಿನ ಸಹಾಯದಿಂದ ನಡೆಯುತ್ತಾ ಬಂದನು.

ರಾಜನು ಅವನಿಗೆ ಧಾನ್ಯವನ್ನು ತೋರಿಸಿದನು. ಅವನಿಗೆ ಕಣ್ಣುಗಳು ಸರಿಯಾಗಿ ಕಾಣುತ್ತಿದ್ದವು.

ರಾಜನು ಮುದುಕನಿಗೆ ಕೇಳಿದ ಪ್ರಶ್ನೆಯನ್ನೇ ಆತನ ತಂದೆಗೂ ಕೇಳಿದನು.

ಈ ಮುದುಕನಿಗೆ ಕೇಳುವುದು ಕಷ್ಟವಾಗಿದ್ದರೂ ತನ್ನ ಮುದುಕ ಮಗನಿಗಿಂತ ಚೆನ್ನಾಗಿ ಕೇಳುತ್ತಿತ್ತು.

ಮುದುಕನು ಹೀಗೆಂದು ಹೇಳಿದನು: "ನಾನು ಇಂತಹ ಧಾನ್ಯವನ್ನು ಎಂದೂ ಬಿತ್ತಲೂ ಇಲ್ಲ, ಕೊಯ್ಯಲೂ ಇಲ್ಲ. ಕ್ರಯಕ್ಕೆ ಪಡೆಯುವುದು ಸಾಧ್ಯವೇ ಇರಲಿಲ್ಲ. ನನ್ನ ಕಾಲದಲ್ಲಿ ಹಣದ ಉಪಯೋಗವೇ ಇರಲಿಲ್ಲ. ಪ್ರತಿಯೊಬ್ಬನೂ ತನಗೆ ಬೇಕಾದ ಧಾನ್ಯಗಳನ್ನು ತಾನೇ ಬೆಳೆಸುತ್ತಿದ್ದನು. ಅವಶ್ಯ ಬಿದ್ದಲ್ಲಿ ನಾವು ಪಾಲುಮಾಡಿಕೊಳ್ಳುತ್ತಿದ್ದೆವು. ಇಂತಹ ಧಾನ್ಯ ಎಲ್ಲಿ ಬೆಳೆಯುತ್ತಿತ್ತೆಂದು ಹೇಳಲಾರೆ. ಆದರೆ ನನ್ನ ಕಾಲದ ಧಾನ್ಯಗಳು ಇಂದು ಬೆಳೆಯುವ ಧಾನ್ಯಗಳಿಗಿಂತ ದೊಡ್ಡವಾಗಿದ್ದುವು. ಮತ್ತು ಹೆಚ್ಚು ಹಿಟ್ಟನ್ನು ಕೊಡುತ್ತಿದ್ದವು. ಆದರೆ ಇಷ್ಟು ದೊಡ್ಡದನ್ನು ನಾನೆಂದೂ ನೋಡಿಲ್ಲ. ಆದರೆ ನನ್ನ ತಂದೆಯು ಕಾಲದ ಧಾನ್ಯಗಳು ಬಹಳ ದೊಡ್ಡದಾಗಿದ್ದವೆಂದೂ ಹೆಚ್ಚು ಹಿಟ್ಟನ್ನು ಕೊಡುತ್ತಿದ್ದುವೆಂದೂ ಹೇಳುವುದನ್ನು ಕೇಳಿದ್ದೇನೆ. ಸರಿಯಾದ ವಿವರಗಳಿಗೆ ನನ್ನ ತಂದೆಯನ್ನೇ ಕೇಳುವುದು ಒಳ್ಳೆಯದು."

ರಾಜನು ಕೂಡಲೇ ಆ ಮುದುಕನ ತಂದೆಯನ್ನು ಕರೆಸಲು ಜನ ಕಳುಹಿಸಿದನು. ಸೇವಕರು ಕೂಡಲೇ ಆ ಮಹಾಮುದುಕನನ್ನು ಕರೆ ತಂದರು. ಆತನು ಊರುಗೋಲಿನ ಸಹಾಯವಿಲ್ಲದೆ ನಡೆಯುತ್ತಾ ಬಂದನು. ಅವನಿಗೆ ಕಣ್ಣುಗಳು ಸರಿಯಾಗಿ ಕಾಣುತ್ತಿದ್ದವು; ಕಿವಿಗಳು ಚೆನ್ನಾಗಿ ಕೇಳಿಸುತ್ತಿದ್ದವು. ಆತನ ಮಾತುಗಳು ವಿರಳವಾಗಿದ್ದವು. ರಾಜನು ಆತನಿಗೆ ಕೋಳಿ ಮೊಟ್ಟೆ ಗಾತ್ರದ ಆ ಧಾನ್ಯವನ್ನು ತೋರಿಸಿದನು. ಆ ವೃದ್ಧ ಪಿತಾಮಹನು ಧಾನ್ಯವನ್ನು ಕಣ್ಣು ತುಂಬಾ ನೋಡಿದನು.

"ಅನೇಕ ವರ್ಷಗಳಿಂದ ನಾನು ಇಂಥ ಧಾನ್ಯವನ್ನು ನೋಡಲೇ ಇಲ್ಲ" ಎಂದು ಹೇಳುತ್ತಾ ಧಾನ್ಯವನ್ನು ಕಚ್ಚಿ ಅದರ ಸವಿ ನೋಡಿದನು.

"ಇದು ಅದೇ ಜಾತಿಯದು!" ಮುದುಕನೆಂದನು.

"ಎಲೈ ವೃದ್ಧನೇ, ಇಂತಹ ಧಾನ್ಯ ಯಾವಾಗ ಮತ್ತು ಎಲ್ಲಿ ಬೆಳೆದಿತ್ತು? ನೀನು ಎಂದಾದರೂ ಇಂತಹ ಧಾನ್ಯಗಳನ್ನು ಪಡೆದಿದ್ದೆಯಾ? ಅಥವಾ ನಿನ್ನ ಗದ್ದೆಗಳಲ್ಲಿ ಬೆಳೆಸಿದ್ದೆಯಾ?" ರಾಜ ಕೇಳಿದನು.

ಮುದುಕ: "ನನ್ನ ಕಾಲದಲ್ಲಿ ಇಂತಹ ಧಾನ್ಯಗಳು ಎಲ್ಲೆಡೆಗಳಲ್ಲಿಯೂ ಬೆಳೆಯುತ್ತಿದ್ದವು. ನನ್ನ ಯೌವನ ಕಾಲದಲ್ಲಿ ಇಂತಹ ಧಾನ್ಯಗಳನ್ನೇ ಆಹಾರವಾಗಿ ಉಪಯೋಗಿಸುತ್ತಿದ್ದೆ ಮತ್ತು ಇತರರಿಗೆ ಕೊಡುತ್ತಿದ್ದೆ. ಇಂತಹ ಧಾನ್ಯಗಳನ್ನೇ ನಾವು ಬಿತ್ತುತ್ತಿದ್ದೆವು, ಬೆಳೆಸುತ್ತಿದ್ದೆವು ಮತ್ತು ಕೊಯ್ಯುತ್ತಿದ್ದೆವು."

ರಾಜ: "ವೃದ್ಧ ಪಿತಾಮಹನೇ, ನಿನಗೆ ಬೇಕಾದಷ್ಟನ್ನೆಲ್ಲ ನೀನೆ ಬೆಳೆಸುತ್ತಿದ್ದೆಯೋ ಅಥವಾ ಕ್ರಯಕ್ಕೆ ಪಡೆಯುತ್ತಿದ್ದೆಯೋ?"

ವೃದ್ಧನು ಮುಗುಳ್ನಗುತ್ತಾ ಹೇಳಿದನು: "ರಾಜನೇ, ನನ್ನ ಕಾಲದಲ್ಲಿ ಆಹಾರವನ್ನು ಕೊಂಡುಕೊಳ್ಳುವ ಅಥವಾ ಮಾರುವಂತಹ ಪಾಪಕೃತ್ಯವನ್ನು ಮನಸ್ಸಿನಲ್ಲಿಯೂ ಕೂಡ ಯಾರೂ ಆಲೋಚಿಸಿರಲಿಲ್ಲ. ನಮಗೆ ಹಣವೆಂಬುದರ ಪರಿಚಯವೇ ಇರಲಿಲ್ಲ. ಪ್ರತಿಯೊಬ್ಬರಿಗೂ ತನ್ನದೇ ಆದ ಧಾನ್ಯಗಳು ಸಾಕಷ್ಟಿದ್ದುವು.''

ರಾಜ: "ಪಿತಾಮಹನೇ, ಇಂತಹ ಧಾನ್ಯಗಳನ್ನು ಬೆಳೆಸುತ್ತಿದ್ದ ನಿನ್ನ ಗದ್ದೆಗಳು ಎಲ್ಲಿದ್ದವು? ತಿಳಿಸಬಲ್ಲೆಯಾ?"

ಮುದುಕ: "ನನ್ನ ಗದ್ದೆಗಳು ದೇವರ ಭೂಮಿಯಲ್ಲಿದ್ದವು. ಉತ್ತದ್ದೆಲ್ಲಾ ನನ್ನ ಗದ್ದೆಗಳೇ. ಆಸ್ತಿಯೆಂಬುದು ಪುಕ್ಕಟೆಯಾಗಿ ಸಿಗುತ್ತಿತ್ತು. ಯಾರೂ ಆಸ್ತಿಯನ್ನು ಸ್ವಂತದ್ದೆಂದು ಕರೆಯುತ್ತಿರಲಿಲ್ಲ. ಶ್ರಮವನ್ನು ಮಾತ್ರ ಸ್ವಂತದ್ದೆಂದು ಕರೆಯುತ್ತಿದ್ದರು."

ಆಗ ರಾಜನು ತನ್ನ ಎರಡು ಪ್ರಶ್ನೆಗಳನ್ನುತ್ತರಿಸುವಂತೆ ವೃದ್ಧನನ್ನು ಕೇಳಿಕೊಂಡನು.

"ಆ ಕಾಲದಲ್ಲಿ ಅಷ್ಟು ಉತ್ತಮವಾದ ಧಾನ್ಯಗಳು ಬೆಳೆಯುತ್ತಿದ್ದು ಈಗ ಬೆಳೆಯದಿರಲು ಕಾರಣವೇನು? ನಿನ್ನ ಮೊಮ್ಮಗನು ಎರಡು ಊರುಗೋಲುಗಳ ಸಹಾಯದಿಂದ ನಡೆಯುತ್ತಾನೆ, ನಿನ್ನ ಮಗನು ಒಂದು ಊರು

ಗೋಲಿನ ಸಹಾಯದಿಂದ ನಡೆಯಬಲ್ಲನು, ನೀನು ಊರುಗೋಲಿನ ಸಹಾಯವಿಲ್ಲದೆ ನಡೆಯಬಲ್ಲೆ; ಇದಕ್ಕೆ ಕಾರಣವೇನು? ನಿನ್ನ ಕಣ್ಣುಗಳು ಶುಭ್ರವಾಗಿವೆ, ಹಲ್ಲುಗಳು ಗಟ್ಟಿಯಾಗಿವೆ, ಮಾತುಗಳು ವಿರಳವಾಗಿವೆ, ಕಿವಿಗಳು ಸರಿಯಾಗಿ ಕೇಳುತ್ತವೆ. ಹೀಗಾಗುವುದಕ್ಕೆ ಕಾರಣವೇನು?"

ಆಗ ಮುದುಕನು ಹೀಗೆಂದು ಉತ್ತರಿಸಿದನು: "ರಾಜನೇ ಮನುಷ್ಯರು ತಮ್ಮ ಸ್ವಂತ ಶ್ರಮದ ಫಲದಿಂದ ಬದುಕುವುದು ಬಿಟ್ಟು ಇತರರ ಶ್ರಮದ ಮೇಲೆ ಹೊಂದಿಕೊಂಡಿರುವುದಕ್ಕೆ ಪ್ರಾರಂಭಿಸಿದುದೇ ಈ ಅವನತಿಗೆ ಕಾರಣ. ಹಿಂದಿನ ಕಾಲದಲ್ಲಿ ದೇವರ ನಿಯಮಗಳಿಗನುಸಾರವಾಗಿ ಜನರು ಜೀವಿಸುತ್ತಿದ್ದರು. ಪ್ರತಿಯೊಬ್ಬನೂ ಸ್ವತಃ ದುಡಿಮೆ ಮಾಡಿದ ಉತ್ಪತ್ತಿಯಲ್ಲೇ ಜೀವಿಸುತ್ತಿದ್ದನಲ್ಲದೆ ಇತರರ ಉತ್ಪನ್ನಕ್ಕಾಗಿ ದುರಾಶೆ ಪಡುತ್ತಿರಲಿಲ್ಲ."

■■■■■■■■■

೨. ದೆವ್ವ-ದೇವರು

ಬಹಳ ಹಿಂದಿನ ಕಾಲದಲ್ಲಿ ಒಂದು ಊರಿನಲ್ಲಿ ಒಬ್ಬ ಸದ್ಗುಣಿಯೂ ದಯಾಳುವೂ ಆದ ವ್ಯಕ್ತಿ ವಾಸಿಸುತ್ತಿದ್ದನು. ಆತನಿಗೆ ಇಹಲೋಕದ ಐಶ್ವರ್ಯ ತುಂಬಾ ಇತ್ತು. ಆತನ ಸೇವೆಗಾಗಿ ಅನೇಕ ಸೇವಕರಿದ್ದರು.

ಸೇವಕರು ತಮ್ಮ ಯಜಮಾನನ ಸದ್ಗುಣಗಳಿಗಾಗಿ ಹೆಮ್ಮೆಪಡುತ್ತಿದ್ದರು. ಅವರು ಆತನನ್ನು ಗೌರವಿಸುತ್ತಿದ್ದರು. ಅವರು ತಮ್ಮ ಧನಿಯನ್ನು ಹೀಗೆಂದು ಹೊಗಳುತ್ತಿದ್ದರು—"ನಮ್ಮ ಒಡೆಯನಿಗಿಂತ ಉತ್ತಮರು ಈ ಜಗತ್ತಿನಲ್ಲಿ ಯಾರೂ ಇಲ್ಲ; ಅವರು ನಮಗೆ ಯೋಗ್ಯ ಊಟ, ಉಡುಗೆ ಮತ್ತು ವಸತಿಗಳನ್ನು ಕಾಲಕಾಲಕ್ಕೆ ಕೊಡುತ್ತಾರೆ. ಇತರ ಯಜಮಾನರಂತೆ ಸೇವಕರನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ಕಾಣುವ, ಶಿಕ್ಷಾರ್ಹರಲ್ಲದಿದ್ದರೂ ಶಿಕ್ಷಿಸುವ, ಒಮ್ಮೆಯಾದರೂ ಯೋಗ್ಯ ಮತ್ತು ಮೃದುಮಾತುಗಳನ್ನಾಡದಿರುವ ಕಠೋರ ಸ್ವಭಾವದವರಲ್ಲ. ಇದಕ್ಕಿಂತ ಉತ್ತಮ ಧಣಿಯನ್ನು ನಾವು ಎಂದೂ ಆಶಿಸುವುದಿಲ್ಲ."

ಈ ರೀತಿಯಲ್ಲಿ ಸೇವಕರು ತಮ್ಮ ಯಜಮಾನನನ್ನು ಹೊಗಳುವುದನ್ನು ನೋಡಿ ಪಾಪಕೃತ್ಯಗಳನ್ನೇ ಪ್ರೋತ್ಸಾಹಿಸುವ ದೆವ್ವಕ್ಕೆ ದುಃಖ

ವಾಯಿತು. ಯಜಮಾನ ಮತ್ತು ಸೇವಕರು ಇಷ್ಟೊಂದು ಅನ್ಯೋನತೆ ಯಿಂದಿರುವುದನ್ನು ನೋಡಿ ನೊಂದ ಮನಸ್ಸುಳ್ಳ ದೆವ್ವವು ಎಲೆಬ್ ಎಂಬ ಸೇವಕನೊಬ್ಬನನ್ನು ತನ್ನ ವಶಪಡಿಸಿಕೊಂಡಿತು. ತನ್ನ ಶಕ್ತಿಯನ್ನು ಅವನ ಮೇಲೆ ಬೀರಿತು. ಇತರ ಸೇವಕರನ್ನೂ ತನ್ನ ಕಡೆ ಆಕರ್ಷಿಸುವಂತೆ ದೆವ್ವವು ಎಲೆಬ್‌ಗೆ ಹೇಳಿತು.

ಒಂದು ದಿನ ಎಲ್ಲಾ ಸೇವಕರೂ ಕುಳಿತುಕೊಂಡು ತಮ್ಮ ಯಜಮಾನರನ್ನು ಹೊಗಳುತ್ತಿರುವಾಗ ದೆವ್ವದ ಪ್ರಭಾವಕ್ಕೆ ಸಿಲುಕಿದ ಎಲೆಬ್‌ನು ತನ್ನ ಅಪಸ್ವರವನ್ನು ಎತ್ತಿದನು:

"ನಮ್ಮ ಯಜಮಾನನನ್ನು ಇಷ್ಟೊಂದು ಹೊಗಳುವುದು ನಿಜವಾಗಿಯೂ ಮೂರ್ಖತನ. ಒಬ್ಬನ ಇಷ್ಟಾರ್ಥದಂತೆ ವರ್ತಿಸಿದರೆ ದೆವ್ವವೂ ಕೂಡ ದಯೆಯನ್ನು ತೋರಿಸೀತು. ನಾವು ಅವನಿಗಾಗಿ ಯೋಗ್ಯರೀತಿ ಯಿಂದ ಸೇವೆಮಾಡುತ್ತೇವೆ. ನಮಗೆ ದಯೆತೋರಿಸದೆ ಅವನು ಇನ್ನೇನು ಮಾಡಬಲ್ಲನು? ಅವನನ್ನು ಸಂತೋಷಗೊಳಿಸುವದರ ಬದಲು ಸ್ವಲ್ಪ ಕಷ್ಟಕೊಟ್ಟರೆ ಅವನ ವರ್ತನೆ ಹೇಗಾಗಬಹುದೆಂದು ಸ್ವಲ್ಪ ಆಲೋಚಿಸಿರಿ. ಆಗ ಇತರ ಯಜಮಾನರಂತೆ ವರ್ತಿಸದಿರಲಾರನು. ಬಹುಶಃ ಎಲ್ಲಾ ಯಜಮಾನರಿಗಿಂತ ಹೀನ ರೀತಿಯಲ್ಲಿ ವರ್ತಿಸಬಹುದು."

ಆಗ ಇತರ ಎಲ್ಲಾ ಸೇವಕರೂ ಎಲೆಬ್‌ನ ಅಭಿಪ್ರಾಯವನ್ನು ಅಲ್ಲಗಳೆದರು. ಆದರೆ ಎಲೆಬ್ ತನ್ನ ಮಾತನ್ನು ರುಜುಪಡಿಸುವುದಕ್ಕಾಗಿ ಯಜಮಾನನನ್ನು ಯಾವುದಾದರೂ ರೀತಿಯಿಂದ ಕೋಪಗೊಳಿಸುವ ದೃಢ ನಿರ್ಧಾರ ಮಾಡಿದನು. ಈ ಕುರಿತು ಆತನಿಗೂ ಇತರ ಸೇವಕರಿಗೂ ಸ್ಪರ್ಧೆ ಬಿತ್ತು. ಎಲ್ಲರೂ ಅವನೊಡನೆ ಪಂಥಕಟ್ಟಿದರು. ಆತನು ತನ್ನ ಕಾರ್ಯದಲ್ಲಿ ಅಪಯಶಸ್ಸು ಹೊಂದಿದರೆ ಆತನ ರಜಾದಿನದ ಬಹುಮಾನದ ಉಡಿಗೆಯನ್ನು ಕಳಕೊಳ್ಳತಕ್ಕದ್ದೆಂದೂ ಯಶಸ್ಸು ಗಳಿಸಿದರೆ ಇತರರು ಅವರ ಉಡುಗೆಗಳನ್ನು ಆತನಿಗೆ ಕೊಡುವುದೆಂದೂ ನಿಶ್ಚಯವಾಯಿತು. ಅಲ್ಲದೆ ಇತರರೂ ಆತನ ಕೆಲಸಕ್ಕೆ ಸಹಾಯಮಾಡುವುದಾಗಿ ಒಪ್ಪಿಕೊಂಡರು. ಆತನಿಗೆ ಶಿಕ್ಷೆಯಾದರೆ ಆತನ ಪರವಾಗಿ ವಾದಿಸುವುದಾಗಿಯೂ ಒಪ್ಪಿದರು. ಮರುದಿನ ಮುಂಜಾನೆ ಯಜಮಾನನನ್ನು ಸಿಟ್ಟುಗೊಳಿಸುವುದಾಗಿ ಎಲೆಬ್ ಒಪ್ಪಿದನು.

ಎಲೆಬ್‌ನು ಕುರಿಮೇಯಿಸುವವನಾಗಿದ್ದನು. ಆತನ ಅಧೀನದಲ್ಲಿ ಅನೇಕ ಉತ್ತಮವಾದ ಮತ್ತು ಬೆಲೆಬಾಳುವ ಕುರಿಗಳಿದ್ದುವು. ಇವುಗಳನ್ನು ಆತನ ಒಡೆಯನು ವಿಶೇಷವಾಗಿ ಪ್ರೀತಿಸುತ್ತಿದ್ದನು. ಮರುದಿನ ಮುಂಜಾನೆ ತನ್ನ ಶ್ರೇಷ್ಠತರದ ಕುರಿಗಳನ್ನು ತೋರಿಸುವುದಕ್ಕಾಗಿ ಕೆಲವು ಸಂದರ್ಶಕರನ್ನು ಕರಕೊಂಡು ಕುರಿಗಳಿರುವ ಆವರಣಕ್ಕೆ ಬಂದನು. ಆಗ ಎಲೆಬ್ ತನ್ನ ಸ್ನೇಹಿತ ಕೆಲಸಗಾರರಿಗೆ ಕಣ್ಣುಸನ್ನೆಯ ಮೂಲಕ ತಾನು ಯಜಮಾನನನ್ನು ಕ್ರೋಧಗೊಳಿಸುವ ಉಪಾಯವನ್ನು ಹೂಡುವುದಾಗಿ ಸೂಚಿಸಿದನು.

ಎಲ್ಲಾ ಸೇವಕರೂ ಮುಂಬರುವ ಘಟನೆಯನ್ನೀಕ್ಷಿಸುವುದಕ್ಕಾಗಿ ಆವರಣದ ಸುತ್ತಲೂ ಸೇರಿದರು. ದೆವ್ವವು ತನ್ನ ಸೇವಕರು ಮಾಡುವದನ್ನು ಅವಲೋಕಿಸುವುದಕ್ಕಾಗಿ ಹತ್ತಿರದ ಒಂದು ಮರವನ್ನೇರಿ ಕುಳಿತಿತು.

ಯಜಮಾನನು ತನ್ನ ಅತಿಥಿಗಳಿಗೆ ಉತ್ತಮವಾದ ಕುರಿಗಳನ್ನೂ, ಟಗರುಗಳನ್ನೂ, ಕುರಿಮರಿಗಳನ್ನೂ, ತೋರಿಸುತ್ತಿದ್ದನು. ಕಡೆಗೆ ಆತನ ಅತ್ಯುತ್ತಮವಾದ ಟಗರೊಂದನ್ನು ಅವರಿಗೆ ತೋರಿಸಲಿಚ್ಛಿಸಿದನು. "ಎಲ್ಲಾ ಟಗರುಗಳೂ ಬೆಲೆಬಾಳುವುಗಳೇ ಆಗಿವೆ. ಆದರೆ ಎಲ್ಲವುಗಳಿಗಿಂತಲೂ ಹೆಚ್ಚು ಬೆಲೆಬಾಳುವುದೊಂದಿದೆ. ಅದನ್ನು ನನ್ನ ಕಣ್ಣಗೊಂಬೆಯಂತೆ ಪ್ರೀತಿಸುತ್ತೇನೆ" ಎಂದು ಯಜಮಾನನು ಹೇಳಿದನು.

ಅಪರಿಚಿತರನ್ನು ಕಂಡು ಬೆರಗಾದ ಕುರಿಗಳು ಚಲ್ಲಾಪಿಲ್ಲಿಯಾಗಿ ಓಡುವುದಕ್ಕಾರಂಭಿಸಿದುವು. ಆದ್ದರಿಂದ ಬಂದವರಿಗೆ ಅತ್ಯುತ್ತಮವಾದ ಟಗರನ್ನು ಸರಿಯಾಗಿ ನೋಡುವುದಕ್ಕಾಗಲಿಲ್ಲ. ಟಗರು ಎಲ್ಲಿಯಾದರೊಂದೆಡೆ ಕದಲದೆ ನಿಂತೊಡನೆ 'ಎಲೆಬ್'ನು ಅವುಗಳನ್ನು ಹೆದರಿಸಿ ಚೆದರಿಸುತ್ತಿದ್ದನು. ಸಂದರ್ಶಕರಿಗೆ ಆ ಬೆಲೆಬಾಳುವ ಟಗರಾವುದೆಂದು ತಿಳಿಯಲಿಲ್ಲ. ಯಜಮಾನನು ತನ್ನ ಪ್ರಯತ್ನದಲ್ಲಿ ನಿರಾಶನಾದನು.

ಆಗ ಯಜಮಾನನು "ಎಲೆಬ್, ದಯಮಾಡಿ ನಮ್ಮ ಉತ್ತಮವಾದ ಟಗರನ್ನು ಹಿಡಿದು ನಿಲ್ಲಿಸು. ಜಾಗ್ರತೆಯಾಗಿ ಹಿಡಿದು ಒಂದೆಡೆ ಕ್ಷಣ ಚಲಿಸದೆ ನಿಲ್ಲುವಂತೆ ಮಾಡು" ಎಂದನು.

ಇಷ್ಟು ಹೇಳುವುದೇ ತಡ. ಎಲೆಬ್‌ನು ಕುರಿಗಳ ಮಧ್ಯಕ್ಕೆ ಸಿಂಹದಂತೆ ಪ್ರವೇಶಿಸಿ ಆ ಬೆಲೆಬಾಳುವ ಟಗರನ್ನು ಹಿಡಿದನು. ಅದರ ಉಣ್ಣೆಯನ್ನು

ಗಟ್ಟಿಯಾಗಿ ಹಿಡಿದೆಳೆವು ಅದರ ಎಡ ಹಿಂಗಾಲನ್ನು ಹಿಡಿದುಕೊಂಡನು. ಯಜಮಾನನ ಎದುರಲ್ಲೇ ಟಗರನ್ನು ಮೇಲಕ್ಕೆತ್ತಿ ಕೊಡಹಿದನು. ಒಣ ಕೊಂಬೆಯಂತೆ ಅದು,ತನ್ನ ಕಾಲು ಮುರಿದುಕೊಂಡು ಕುಂಟುತ್ತಾ ನೆಲದಲ್ಲಿ ಬಿತ್ತು. ಆಗ ಎಲೆಬ್‌ನು ಅದರ ಬಲ ಹಿಂಗಾಲನ್ನು ಹಿಡಿದೆತ್ತಿದನು.

ಅಲ್ಲಿದ್ದವರೆಲ್ಲಾ ಆತನ ವರ್ತನೆಯನ್ನು ನೋಡಿ ಆಶ್ಚರ್ಯಚಕಿತ ರಾದರು. ಮರದ ಮೇಲಿದ್ದ ದೆವ್ವಕ್ಕೆ ತನ್ನ ಸೇವಕನು ಒಳ್ಳೆಯ ರೀತಿ ಯಿಂದ ಕೆಲಸಮಾಡಿದನೆಂದು ಸಂತೋಷವಾಯಿತು. ಆದರೆ ಯಜಮಾನನ ಮುಖ ಕಪ್ಪಾಯಿತು. ಎಲ್ಲಿಲ್ಲದ ಕ್ರೋಧ ಆತನ ಮುಖದಲ್ಲಿ ಕಾಣಿಸಿ ಕೊಂಡಿತು. ಆದರೆ ಒಂದು ಮಾತನ್ನೂ ಆಡಲಿಲ್ಲ. ಎಲ್ಲರೂ ಮುಂದಿನ ಘಟನೆಯೇನಾಗುವುದೋ ಎಂದು ನೋಡುವುದಕ್ಕಾಗಿ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಸ್ವಲ್ಪ ಸಮಯ ಸುಮ್ಮನಿದ್ದು ಯಜಮಾನನು ತನ್ನ ತಲೆಯಿಂದ ಏನೋ ಹೊರೆಯನ್ನು ಹೋಗಲಾಡಿಸುವುದಕ್ಕಾಗಿಯೋ ಎಂಬಂತೆ ತಲೆಯನ್ನು ಕೊಡಹಿದನು. ಅನಂತರ ತಲೆಯನ್ನು ಮೇಲಕ್ಕೆತ್ತಿ ಸ್ವಲ್ಪ ಹೊತ್ತು ಧ್ಯಾನಮಗ್ನನಾದನು. ಇಷ್ಟರಲ್ಲಿ ಆತನ ಕ್ರೋಧ ಮಾಯ ವಾಗಿತ್ತು.

ಯಜಮಾನ ಮುಗುಳ್ನಗುತ್ತಾ, ಎಲೆಬ್‌ಗೆ ಹೇಳಿದನು: "ಎಲೈ ಎಲೆಬ್, ನಿನ್ನ ಒಡೆಯನು ನನ್ನನ್ನು ಸಿಟ್ಟುಗೊಳಿಸುವಂತೆ ಹೇಳಿದನು. ಆದರೆ ನನ್ನ ಯಜಮಾನನು ನಿನ್ನವನಿಗಿಂತ ಬಲಶಾಲಿ. ನಾನು ನಿನ್ನಲ್ಲಿ ಸಿಟ್ಟುಗೊಂಡಿಲ್ಲ. ಆದರೆ ನಿನ್ನ ಯಜಮಾನನ್ನು ಸಿಟ್ಟುಗೊಳಿಸುವ ನಾನು ನಿನ್ನನ್ನು ಶಿಕ್ಷಿಸುವೆನೆಂದು ನಿನಗೆ ಹೆದರಿಕೆಯಿರಬಹುದು. ನೀನು ನಿನ್ನ ಸ್ವಾತಂತ್ರ್ಯವನ್ನಪೇಕ್ಷಿಸುತ್ತಿರುವುದರಿಂದ ಈ ನನ್ನ ಅತಿಥಿಗಳ ಸಮ್ಮುಖದಲ್ಲೇ ನಿನ್ನನ್ನು ಸ್ವತಂತ್ರನನ್ನಾಗಿ ಮಾಡುತ್ತೇನೆ. ಎಲ್ಲಿ ಬೇಕಾದರೂ ಹೋಗು. ನಿನ್ನ ರಜಾ ದಿನದ ಬಹುಮಾನವೂ ನಿನ್ನೊಂದಿಗಿರಲಿ!"

ದಯಾಮಯನಾದ ಯಜಮಾನನು ತನ್ನ ಅತಿಥಿಗಳೊಂದಿಗೆ ಮನೆಗೆ ಹೋದನು. ಆದರೆ ಮರದ ಮೇಲಿದ್ದ ದೆವ್ವವು ತನ್ನ ಹಲ್ಲುಗಳನ್ನು ಕಡಿ ಯುತ್ತಾ ಮರದಿಂದ ಕೆಳಕ್ಕೆ ಬಿದ್ದು ನೆಲದಡಿಗೆ ಹೋಯಿತು.

▪▪▪▪▪▪▪▪▪

೩. ದೊಡ್ಡವರ ವಿವೇಕ

ಅಂದು ಕ್ರಿಸ್ತನ ಪುನರುತ್ಥಾನದ (Easter) ದಿನವಾಗಿತ್ತು. ಜಾರುಬಂಡಿಗಳ ಎಳೆದಾಟ ಆಗ ತಾನೆ ಮುಗಿದಿತ್ತು. ಅಂಗಳಗಳಲ್ಲಿ ಹಿಮವು ಇನ್ನೂ ತುಂಬಿಕೊಂಡಿತ್ತು. ಗ್ರಾಮದ ಬೀದಿಗಳಲ್ಲಿ ನೀರು ಪ್ರವಾಹವಾಗಿ ಹರಿಯುತ್ತಲಿತ್ತು.

ಬೇರೆ ಬೇರೆ ಮನೆಗಳಿಂದ ಬಂದ ಇಬ್ಬರು ಚಿಕ್ಕ ಬಾಲಕಿಯರು ಎರಡು ಮನೆಗಳ ನಡುವೆಯಿರುವ ಗಲ್ಲಿಯೊಂದರಲ್ಲಿ ಭೇಟಿಯಾದರು. ಗದ್ದೆಗಳಿಂದ ಕೊಳೆಯೊಡನೆ ಹರಿದು ಬಂದ ನೀರು ತುಂಬಿ ಕೊಳಕು ನೀರಿನ ಕೊಳವೊಂದು ಅಲ್ಲಿ ಉಂಟಾಗಿತ್ತು. ಬಂದ ಬಾಲಕಿಯರಿಬ್ಬರಲ್ಲಿ ಒಬ್ಬಳು ಬಲು ಚಿಕ್ಕವಳು, ಮತ್ತೊಬ್ಬಳು ಅವಳಿಗಿಂತ ದೊಡ್ಡವಳು. ಅವರ ತಾಯಂದಿರು ಅವರನ್ನು ಹೊಸದಾದ ಉಡುಗೆಗಳಿಂದ ಶೃಂಗರಿಸಿದ್ದರು. ಬಲು ಚಿಕ್ಕವಳು ನೀಲಿ ಬಣ್ಣದ ಅಂಗಿಯನ್ನು ಧರಿಸಿದ್ದಳು. ಇನ್ನೊಬ್ಬಳು ಕೆಂಬಣ್ಣದ ಕರವಸ್ತ್ರವನ್ನು ತಲೆಗೆ ಸುತ್ತಿಕೊಂಡಿದ್ದಳು. ಇಬ್ಬರೂ ಇಗರ್ಜಿಯಿಂದ ಆಗ ತಾನೆ ಬಂದವರಾಗಿದ್ದರು. ಸಂಧಿಸಿದೊಡನೆ ತಮ್ಮ ತಮ್ಮ ವೇಷ ಭೂಷಣಗಳನ್ನು ತೋರಿಸಿಕೊಂಡರು. ಅನಂತರ ಆಡುವುದಕ್ಕೆ ಆರಂಭಿಸಿದರು. ಕೂಡಲೇ ಅವರ ಚಾಪಲ್ಯವು ನೀರನ್ನು ಹಾರಿಸುವುದಕ್ಕೆ ತಿರುಗಿತು. ನೀರು ಹಾರಿಸುವ ಚಾಪಲ್ಯದಲ್ಲಿ ಸಣ್ಣವಳು ತನ್ನ ಎಕ್ಕಡ ಕಾಲುಚೀಲಗಳ ಸಮೇತ ಕೊಳಕು ನೀರಿನ ಹೊಂಡಕ್ಕಿಳಿಯುವುದರಲ್ಲಿ ಇದ್ದಳು. ಆದರೆ ದೊಡ್ಡವಳು ತಡೆದು ಹೀಗೆಂದಳು: —

"ಮಲಾಶಾ, ನೀನು ನಿನ್ನ ಎಕ್ಕಡಗಳ ಸಮೇತ ಹೀಗೆ ಮಾಡಿದರೆ ನಿನ್ನ ತಾಯಿಯು ನಿನ್ನನ್ನು ಬೈಯುವಳು. ನಾನು ನನ್ನ ಎಕ್ಕಡಗಳನ್ನೂ ಕಾಲುಚೀಲಗಳನ್ನೂ ತೆಗೆದಿಡುತ್ತೇನೆ; ನೀನು ನಿನ್ನವುಗಳನ್ನು ತೆಗೆದಿಡು."

ಇಬ್ಬರೂ ಹಾಗೆಯೇ ಮಾಡಿದರು. ಅನಂತರ ತಮ್ಮ ಅಂಗಿಯನ್ನು ಮೇಲಕ್ಕೇರಿಸುತ್ತಾ ನೀರಿನ ಕೊಳಕ್ಕೆ ಇಕ್ಕಡೆಗಳಿಂದ ಇಳಿಯುತ್ತಾ ಇದಿರಿದಿರಾಗಿ ಬಂದರು. ನೀರು ಮಲಾಶಳ ಮಣಿಗಂಟಿನ ವರೆಗೆ ಬಂತು. ಆಗ ಅವಳು ಹೀಗೆಂದಳು:—

"ಅಕುಲ್ಯಾ, ಇದು ಬಹಳ ಆಳವಾಗಿದೆ" ನನಗೆ ಹೆದರಿಕೆಯಾಗುತ್ತಿದೆ.

ಅಕುಲ್ಯಾ: "ಬಾ ಮುಂದೆ, ಹೆದರಬೇಡ ಇನ್ನೂ ಇದಕ್ಕಿಂತ ಹೆಚ್ಚು ಆಳವಿರಲಾರದು."

ಇಬ್ಬರೂ ಹತ್ತಿರಕ್ಕೆ ಬಂದಾಗ ಅಕುಲ್ಯಾ ಹೀಗೆಂದಳು:—'ಮಲಾಶಾ, ಜಾಗ್ರತೆಯಿಂದ ನಡೆ; ನೀರು ಹಾರಿಸಬೇಡ, ಇದನ್ನು ನೆನಪಿನಲ್ಲಿಟ್ಟುಕೋ.'

ಅಷ್ಟರಲ್ಲಿ ಮಲಾಶಳು ತನ್ನ ಕಾಲನ್ನು ಎತ್ತಿ ನೀರಿಗೆ ತುಳಿದಾಗಿತ್ತು. ಕೊಳಕು ನೀರು ಅಕುಲ್ಯಾಳ ಹೊಸ ಅಂಗಿಗೆ ಹಾರಿತು. ಅದರೊಂದಿಗೆ ಅವಳ ಕಣ್ಣು ಮೂಗುಗಳಿಗೂ ಕೊಳೆ ನೀರು ಹಾರಿತು. ತನ್ನ ಅಂಗಿಗಾದ ಕಲೆಗಳನ್ನು ನೋಡಿ ಅವಳಿಗೆ ಸಿಟ್ಟು ಬಂತು. ಮಲಾಶಳನ್ನು ಹೊಡೆಯುವುದಕ್ಕಾಗಿ ಓಡಿದಳು. ಮಲಾಶಳಿಗೆ ಹೆದರಿಕೆಯಾಯಿತು.

ತಾನು ಕಷ್ಟದಲ್ಲಿ ಸಿಲುಕಿದೆನೆಂದು ತಿಳಿದು ಮೆಲ್ಲನೆ ಕೊಳದಿಂದ ಮೇಲೆ ಬಂದು ತನ್ನ ಮನೆಯ ಕಡೆಗೆ ಓಡಲುದ್ಯುಕ್ತಳಾದಳು. ಅದೇ ಸಂದರ್ಭದಲ್ಲಿ ಅಕುಲ್ಯಾಳ ತಾಯಿ ■ ದಾರಿಯಲ್ಲಿ ಬಂದಳು. ತನ್ನ ಮಗಳ ಕೊಳಕಾದ ವೇಷ ಭೂಷಣಗಳನ್ನು ನೋಡಿ "ಕೆಟ್ಟ ಹುಡುಗಿಯೇ, ನೀನು ಏನು ಮಾಡುತ್ತಾ ಇದ್ದೀ?" ಎಂದಳು. ಮಲಾಶಳು ಉದ್ದೇಶಪೂರ್ವಕ ಹೀಗೆ ಮಾಡಿದಳೆಂದು ಅಕುಲ್ಯಾಳು ಉತ್ತರಿಸಿದಳು.

ಇದನ್ನು ಕೇಳಿದೊಡನೆ ಅಕುಲ್ಯಾಳ ತಾಯಿಯು ಮಲಾಶಳನು ಹಿಡಿದು ಅವಳ ಕುತ್ತಿಗೆಯ ಹಿಂಭಾಗಕ್ಕೆ ಬಲವಾದ ಏಟೊಂದನ್ನು ಬಿಗಿದಳು; ಬೀದಿಯುದ್ದಕ್ಕೂ ಕೇಳುವಂತೆ ಮಲಾಶಳು ಬೊಬ್ಬಿಟ್ಟು ಕೂಗುವುದಕ್ಕೆ ಆರಂಭಿಸಿದಳು. ಆಗ ಮಲಾಶಳ ತಾಯಿಯು ಅಲ್ಲಿಗೆ ಬಂದಳು.

'ನನ್ನ ಮಗಳನ್ನು ಯಾತಕ್ಕಾಗಿ ಹೊಡೆಯುತ್ತಿ?' ಎಂದು ಕೇಳಿದುದಲ್ಲದೆ ತನ್ನ ನೆರೆಹೊರೆಯುವಳನ್ನು ಚೆನ್ನಾಗಿ ಬೈದಳು. ಮಾತಿಗೆ ಪ್ರತಿ ಮಾತನ್ನು ಹೇಳುತ್ತಾ ಜಗಳವನ್ನಾರಂಭಿಸಿದಳು ಅಷ್ಟರಲ್ಲಿ ಗಂಡಸರೂ ಅಲ್ಲಿಗೆ ಬಂದರು. ಅನೇಕರು ಬೀದಿಯಲ್ಲಿ ಗುಂಪುಕೂಡಿದರು. ಎಲ್ಲರೂ ಬೊಬ್ಬಿಡುವುದಕ್ಕಾರಂಭಿಸಿದರು. ಕೇಳುವವರೊಬ್ಬರೂ ಇರಲಿಲ್ಲ. ಎಲ್ಲರೂ ಎರಡು ತಂಡಗಳಾಗಿ ಜಗಳಾಡುತ್ತಾ ಹೊಡೆದಾಟ ಬಡಿದಾಟಕ್ಕೂ ತಯಾರಾಗಹತ್ತಿದರು. ಅಷ್ಟರಲ್ಲಿ ಅಕುಲ್ಯಾಳ ಮುದಿ ಅಜ್ಜಿಯೊಬ್ಬಳು ಇವರನ್ನು ಶಾಂತಗೊಳಿಸುವುದಕ್ಕಾಗಿ ಅಲ್ಲಿಗೆ ಬಂದಳು:

"ಎಲೈ ಸ್ನೇಹಿತರೇ, ನೀವು ಏನನ್ನಾಲೋಚಿಸುತ್ತಿದ್ದೀರಿ? ಹೀಗೆ ವರ್ತಿಸುವುದು ಸರಿಯೇ? ಅದೂ ಇಂತಹ ಪವಿತ್ರ ದಿನದಲ್ಲಿ! ಇದು ಸಂತಸಪಡುವ ಸಮಯವೇ ಹೊರತು ತಪ್ಪನ್ನು ಮಾಡುವ ಸಮಯವಲ್ಲ."

ಮುದುಕಿಯ ಮಾತನ್ನು ಯಾರೂ ಕೇಳಲಿಲ್ಲ. ಅವಳನ್ನು ಎಲ್ಲರೂ ಹಿಂದಕ್ಕೆ ದೂಡಿದರು. ಇಷ್ಟರಲ್ಲಿ ಅಕುಲ್ಯಾ ಮತ್ತು ಮಲಾಶಳ ಸಹಾಯವಿಲ್ಲದಿರುತ್ತಿದ್ದರೆ ಜನರ ಗುಂಪನ್ನು ಸಮಾಧಾನಗೊಳಿಸಲು ಆ ಮುದುಕಿಗೆ ಸಾಧ್ಯವಾಗುತ್ತಿರಲಿಲ್ಲ. ಹೆಂಗಸರು ಅನ್ಯೋನ್ಯ ಜಗಳವಾಡುತ್ತಿರುವಾಗಲೇ ಅಕುಲ್ಯಾಳು ತನ್ನ ಅಂಗಿಯಲ್ಲಿದ್ದ ಮಣ್ಣನ್ನೊರಸಿಕೊಂಡು ಪುನಃ ನೀರು ತುಂಬಿದ ಸ್ಥಳವನ್ನು ಸೇರಿದ್ದಳು. ಒಂದು ಕಲ್ಲಿನ ಸಹಾಯದಿಂದ ನೀರಿನ ಹಳ್ಳದ ಎದುರಿನಿಂದ ಮಣ್ಣನ್ನು ಕೊರೆಯುತ್ತಾ ಒಂದು ಸಣ್ಣ ಚರಂಡಿಯನ್ನು ಮಾಡುವದಕ್ಕಾರಂಭಿಸಿದ್ದಳು. ಈ ಚರಂಡಿಯು ನೀರು ಬೀದಿಗೆ ಹರಿಯುವುದರಲ್ಲಿತ್ತು.

ಮಲಾಶಳೂ ಅವಳೊಡನೆ ಸೇರಿ ಅವಳ ಕೆಲಸದಲ್ಲಿ ಸಹಭಾಗಿಯಾದಳು. ಒಂದು ಮರದ ತುಂಡಿನಿಂದ ಚರಂಡಿ ಕೊರೆಯುವದಕ್ಕೆ ಅಕುಲ್ಯಾಳೊಡನೆ ಸೇರಿದಳು. ಈ ಸಂದರ್ಭದಲ್ಲಿ ಅಲ್ಲಿ ಸೇರಿದ ಗಂಡಸರೂ ಹೊಡೆದಾಟಕ್ಕಾರಂಭಿಸುವುದರಲ್ಲಿದ್ದರು. ಇಷ್ಟರಲ್ಲಿ ಬಾಲಕಿಯರು ನಿರ್ಮಿಸಿದ ಚರಂಡಿಯ ಮೂಲಕ ನೀರು, ಪ್ರವಾಹವಾಗಿ, ಜಗಳವಾಡುವ ಜನರನ್ನು ಮುದುಕಿಯು ಸಮಾಧಾನಪಡಿಸುತ್ತಿದ್ದ ಸ್ಥಳಕ್ಕೆ ಹರಿಯಿತು. ಬಾಲಕಿಯರು ನೀರಿನ ಪ್ರವಾಹದ ಇಕ್ಕೆಡೆಗಳಲ್ಲಿಯೂ ಓಡುತ್ತಾ ಆ ನೀರನ್ನು ಹಿಂಬಾಲಿಸಿದರು. "ಅದನ್ನು ಹಿಡಿದುಕೋ" ಎಂದು ಅಕುಲ್ಯಾಳು ಬೊಬ್ಬಿಟ್ಟಳು. ಆನಂದಾತಿರೇಕದಿಂದ ಮಲಾಶಳ ಬಾಯಿಂದ ಮಾತೇ ಹೊರಡಲಿಲ್ಲ.

ಆನಂದತುಂದಿಲರಾದ ಮಕ್ಕಳು ನೀರಿನೊಂದಿಗೆ ತೇಲಿ ಹೋಗುತ್ತಿರುವ ಮರದ ತುಂಡನ್ನು ಹಿಂಬಾಲಿಸುತ್ತಾ ಜನಜಂಗುಳಿಯ ಮಧ್ಯಕ್ಕೆ ಬಂದರು. ಸಂತಸದಿಂದ ಕುಣಿದಾಡುವ ಎಳೆ ಮಕ್ಕಳನ್ನು ನೋಡಿದ ಮುದುಕಿಯು ಅಲ್ಲಿ ಜಗಳಾಡುತ್ತಿರುವ ಪ್ರೌಢರನ್ನುದ್ದೇಶಿಸಿ ಹೀಗೆಂದಳು:

"ನಿಮ್ಮ ವರ್ತನೆಯನ್ನು ನೋಡಿ ನಿಮಗೆ ನಾಚಿಕೆಯಾಗುವುದಿಲ್ಲವೇ? ಈ ಎಳೆ ಮಕ್ಕಳು ತಮ್ಮ ಜಗಳವನ್ನು ಸಂಪೂರ್ಣ ಮರೆತು ಸಂತಸದಿಂದ

ಆಡುತ್ತಿದ್ದರೂ, ಇವರ ಕಾರಣದಿಂದುಂಟಾದ ಜಗಳವನ್ನು ಮುಂದುವರಿಸುತ್ತಿರುವಿರಲ್ಲಾ! ಅವರು ನಿಮಗಿಂತ ನಿಜವಾಗಿಯೂ ವಿವೇಕಿಗಳು!!"

ಆಗ ಅಲ್ಲಿ ಸೇರಿದ ಜನರು ಆ ಸಣ್ಣ ಬಾಲಕಿಯರನ್ನು ನೋಡಿ ನಾಚಿಗೆಪಟ್ಟುಕೊಂಡರು. ತಮ್ಮ ವರ್ತನೆಗಾಗಿ ತಮಗೆ ತಾವೇ ನಾಚಿಕೊಂಡು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು.

▪▪▪▪▪▪▪▪

೪. ಸತ್ಯಮೇವ ಜಯತೆ

ವ್ಲಾಡಿಮಾರ್ ಎಂಬುದೊಂದು ಪಟ್ಟಣ. ಆ ಪಟ್ಟಣದಲ್ಲಿ ಇವಾನ್ ಡಿಮಿಟ್ರಿಚ್ ಆಕ್ಸೆನೋವ್ ಎಂಬ ಒಬ್ಬ ಯುವಕ ವ್ಯಾಪಾರಿಯು ವಾಸಿಸುತ್ತಿದ್ದನು. ಆತನಿಗೆ ತನ್ನದೇ ಆದ ಎರಡು ಅಂಗಡಿಗಳೂ, ಒಂದು ಮನೆಯೂ ಇದ್ದುವು.

ಆಕ್ಸೆನೋವ್ ನೋಡುವುದಕ್ಕೆ ರೂಪವಂತನೂ, ಅಚ್ಚುಕಟ್ಟಾದ ದೇಹವುಳ್ಳವನೂ ಆಗಿದ್ದನು. ಆತನು ತುಂಬ ವಿನೋದಪ್ರಿಯನೂ ಸಂಗೀತಪ್ರಿಯನೂ ಆಗಿದ್ದನು. ಬಹಳ ಚಿಕ್ಕಂದಿನಲ್ಲಿ ಕುಡಿಯುವುದೇ ಮೊದಲಾದ ಕೆಟ್ಟ ಅಭ್ಯಾಸಗಳಿದ್ದರೂ ಮದುವೆಯಾದನಂತರ ಕೆಟ್ಟ ಅಭ್ಯಾಸಗಳನ್ನೆಲ್ಲಾ ಬಿಟ್ಟಿದ್ದನು.

ಒಂದು ದಿನ ಬೇಸಗೆಯ ಕಾಲದಲ್ಲಿ ದೂರದ ಒಂದು ಸಂತೆಗೆ ಹೋಗುವುದಕ್ಕೆ ಹೊರಟನು. ಆಗ ಆತನ ಹೆಂಡತಿಯು ಆತನನ್ನು ತಡೆದು ಹೀಗೆಂದಳು:

"ನಿನ್ನೆ ರಾತ್ರಿ ನನಗೊಂದು ಕೆಟ್ಟ ಕನಸು ಬಿದ್ದಿದೆ. ಆದ್ದರಿಂದ ನೀವು ಈ ದಿನ ಹೋಗಬೇಡಿ." ಆಗ ಆಕ್ಸೆನೋವ್ ನಗುತ್ತಾ ಹೇಳಿದನು: "ಬಹುಶಃ ನಾನು ಸಂತೆಗೆ ಹೋದೊಡನೆ ಮಾದಕ ಪದಾರ್ಥಗಳನ್ನು ಸೇವಿಸಿ ಆನೋದಪಡಬಹುದೆಂಬ ಹೆದರಿಕೆ ನಿನಗೆ."

ಹೆಂಡತಿ: "ಯಾವ ಹೆದರಿಕೆಯೆಂದು ಹೇಳಬರುವುದಿಲ್ಲ. ಆದರೆ ನೀವು ಪಟ್ಟಣದಿಂದ ಹಿಂದಿರುವಾಗ ನಿಮ್ಮ ತಲೆಯೆಲ್ಲಾ ಬೆಳ್ಳಗಾಗಿತ್ತೆಂದು ಕನಸು ಕಟ್ಟಿದೆ."

ಆಕ್ಸೆನೋವ್ ನಗುತ್ತಾ: "ನಿನ್ನ ಕನಸು ಬಹಳ ಒಳ್ಳೆಯ ಶಕುನ. ನಾನು ನನ್ನ ವಸ್ತುಗಳನ್ನೆಲ್ಲಾ ಮಾರಿ ನಿನಗೊಂದು ಬಹುಮಾನವನ್ನು ತರುತ್ತೇನೋ ಇಲ್ಲವೋ ನೋಡು."

ಹೀಗೆ ಹೇಳಿ ತನ್ನ ಬಳಗಕ್ಕೆ ಕಡೇ ಪ್ರಣಾಮವನ್ನರ್ಪಿಸಿ ಹೊರಟೇ ಬಿಟ್ಟನು.

ಸಾಧಾರಣ ಅರ್ಧ ದಾರಿಗಾಗಮಿಸಿದಾಗ ತನಗೆ ಪರಿಚಯವಿದ್ದ ಇನ್ನೊಬ್ಬ ವ್ಯಾಪಾರಿಯ ಭೇಟಿಯಾಯಿತು. ಆ ದಿನ ರಾತ್ರಿ ಇಬ್ಬರೂ ಒಂದೇ ಛತ್ರದಲ್ಲಿ ಉಳಕೊಂಡರು. ಇಬ್ಬರೂ ಒಟ್ಟಿಗೆ ಚಹವನ್ನೂ ಸೇವಿಸಿದರು. ಹತ್ತಿರದ ಬೇರೆ ಬೇರೆ ಕೋಣೆಗಳಲ್ಲಿ ಇಬ್ಬರೂ ಉಳಕೊಂಡರು.

ಬೇಗನೆ ನಿದ್ದೆ ಮಾಡುವುದು ಅಕ್ಸೆನೋವಿನ ಅಭ್ಯಾಸವಾಗಿತ್ತು. ಬಿಸಿಲು ಬಳುವ ಮೊದಲೇ ಪ್ರಯಾಣ ಬೆಳೆಸಬೇಕೆಂಬ ಉದ್ದೇಶದಿಂದ ಮುಂಜಾನೆಗೆ ಮುಂಚಿತವಾಗಿ ತನ್ನ ಗಾಡಿ ಹೊಡೆಯುವವನನ್ನು ಎಬ್ಬಿಸಿ ಪ್ರಯಾಣ ಬೆಳೆಸಲು ನಿಶ್ಚೈಸಿದನು. ಅಲ್ಲೇ ಹತ್ತಿರದ ಮನೆಯಲ್ಲಿ ವಾಸಿಸುತ್ತಿದ್ದ ಛತ್ರದ ಯಜಮಾನನ ಹಣವನ್ನು ಪಾವತಿಮಾಡಿ ಮುಂದಕ್ಕೆ ಪ್ರಯಾಣ ಬೆಳೆಸಿದನು.

ಅಲ್ಲಿಂದ ೨೫ ಮೈಲು ಮುಂದೆ ಹೋದಾಗ ಕುದುರೆಗಳಿಗೆ ಆಹಾರ ಕೊಡುವುದಕ್ಕಾಗಿ ಸಮೀಪದಲ್ಲಿದ್ದ ಛತ್ರದ ಮುಂಭಾಗದಲ್ಲಿ ಸ್ವಲ್ಪ ವಿಶ್ರಮಿಸಿದನು. ಅಲ್ಲಿ ಸ್ವಲ್ಪ ಆಹಾರವನ್ನು ತಾನೂ ಸೇವಿಸಿ ನಿಶ್ಚಿಂತೆಯಿಂದ ತನ್ನ ವೀಣೆಯನ್ನು ನುಡಿಸುವುದಕ್ಕಾರಂಭಿಸಿದನು.

ಇಷ್ಟರಲ್ಲಿ ಒಂದು ಕುದುರೆ ಗಾಡಿಯು ಅಲ್ಲಿಗೆ ಬಂತು. ಒಬ್ಬ ಅಧಿಕಾರಿಯು ಇಬ್ಬರು ಸೈನಿಕರೊಂದಿಗೆ ಬಂದಿಳಿದನು. ಬಂದ ಅಧಿಕಾರಿಯು ಆಕ್ಸೆನೋವಿನೊಡನೆ ಹಲವಾರು ಪ್ರಶ್ನೆಗಳನ್ನು ಕೇಳಿದನು. ಆತನ ಹೆಸರೇನು? ಹಿಂದಿನ ರಾತ್ರಿ ಉಳಿದುಕೊಂಡುದೆಲ್ಲಿ? ಆತನೊಡನೆ ಇನ್ಯಾರಿದ್ದರು? ಎಂಬಿತ್ಯಾದಿ ಪ್ರಶ್ನೆಗಳನ್ನು ಆತನನ್ನು ತನಿಖೆ ಮಾಡುವ ಉದ್ದೇಶದಿಂದ ಕೇಳಿದನು. ಆಕ್ಸೆನೋವಿಗೆ ಪ್ರಶ್ನೆಗಳ ಅರ್ಥವಾಗಲಿಲ್ಲ. ಆದರೂ ತನ್ನ ಪ್ರಯಾಣದ ವಿವರಗಳೆಲ್ಲವನ್ನೂ ಹೇಳಿದನು. ಅನಂತರ ಯಾತಕ್ಕಾಗಿ ಕಳ್ಳನನ್ನೋ, ದರೋಡೆಗಾರರನ್ನೋ ಪ್ರಶ್ನಿಸುವಂತೆ ತನ್ನನ್ನು ಪ್ರಶ್ನಿಸುತ್ತಿರುವಿರೆಂದು ಕೇಳಿದನು. ತಾನು ತನ್ನ ಕಾರ್ಯನಿಮಿತ್ತ ಪ್ರಯಾಣ ಮಾಡುವುದಾಗಿಯೂ, ತನ್ನನ್ನು ಪ್ರಶ್ನಿಸುವ ಅವಶ್ಯವಿಲ್ಲವೆಂದೂ ತಿಳಿಸಿದನು.

ಆಗ ಆ ಅಧಿಕಾರಿಯು ಸೈನಿಕರನ್ನು ಹತ್ತಿರಕ್ಕೆ ಕರೆದು ಅಕ್ಸೆನೋವಿನೊಡನೆ ಹೀಗೆಂದನು:—"ನಾನು ಪೋಲೀಸ್ ಅಧಿಕಾರಿ. ನಿನ್ನೊಡನೆ ನಿನ್ನೆ ರಾತ್ರಿಯಿದ್ದ ವ್ಯಾಪಾರಿಯು ಕೊಲೆ ಮಾಡಲ್ಪಟ್ಟಿರುವನು. ಆದ್ದರಿಂದ ನಿನ್ನ ವಿಚಾರಣೆಯಾಗಬೇಕಾಗಿದೆ. ನಿನ್ನ ವಸ್ತುಗಳನ್ನು ಹುಡುಕಬೇಕಾಗಿದೆ" ಪೋಲೀಸ್ ಅಧಿಕಾರಿಯೂ ಸೈನಿಕರೂ ಆಕ್ಸೆನೋವಿನ ಸಾಮಾಗ್ರಿಗಳನ್ನೆಲ್ಲಾ ಪರಿಶೀಲಿಸಿ ಅವನ ಚೀಲದೊಳಗೆ ರಕ್ತಲೇಪಿತವಾದ ಒಂದು ದೊಡ್ಡ ಚೂರಿಯನ್ನು ಕಂಡರು.

"ಇದು ಯಾರ ಚೂರಿ? ಇದರಲ್ಲಿ ರಕ್ತವೆಲ್ಲಿಂದ ಬಂತು?" ಒಂದು ಪ್ರಶ್ನಿಸಿದರು.

ಅಕ್ಸೆನೋವ್ ದಿಗ್‌ಭ್ರಮೆಗೊಂಡನು. ಉತ್ತರಿಸುವುದಕ್ಕೆ ಪ್ರಯತ್ನಿಸಿದರೂ ಮಾತುಗಳು ಹೊರಡಲಿಲ್ಲ. ಆತನಿಗೆ ನಡುಕವುಂಟಾಯಿತು. "ನ....ನಗೆ.... ಗೊ ... ತ್ತಿಲ್ಲ ಚೂ ... ರಿ.... ನ ... ನ್ನ.... ದಲ್ಲ" ಎಂದನು.

ಆಗ ಪೋಲೀಸ್ ಅಧಿಕಾರಿ ಹೇಳಿದನು: "ಈ ದಿನ ಮುಂಜಾನೆ, ನಿನ್ನೊಡನೆ ಇದ್ದ ವ್ಯಾಪಾರಿಯು ಆತನ ಹಾಸಿಗೆಯಲ್ಲೇ ಖೂನಿಮಾಡಲ್ಪಟ್ಟಿರುವನು. ಈ

ಖೂನಿಯನ್ನು ನೀನು ಹೊರತು ಬೇರೆ ಯಾರೂ ಮಾಡುವುದಕ್ಕೆ ಆಸ್ಪದವಿಲ್ಲ. ಮನೆಗೆ ಒಳಗಡೆಯಿಂದ ಚಿಲುಕ ಹಾಕಲ್ಪಟ್ಟಿತ್ತು. ಒಳಗೆ ಬೇರೆ ಯಾರೂ ಇರಲಿಲ್ಲ. ನಿನ್ನ ಚೀಲದಲ್ಲಿ ರಕ್ತಲೇಪಿತ ಚೂರಿಯಿದೆ. ನಿನ್ನ ಮುಖ ಮತ್ತು ವರ್ತನೆಗಳನ್ನು ನೋಡುವಾಗ ನಿನ್ನ ತಪ್ಪು ವ್ಯಕ್ತವಾಗುತ್ತದೆ. ಆದ್ದರಿಂದ ನೀನವನನ್ನು ಕೊಲೆಗೈದುದು ಹೇಗೆ? ಮತ್ತು ಎಷ್ಟು ಹಣವನ್ನು ಅಪಹರಿಸಿರುವೆ? ಹೇಳು." ಆಗ ಆಕ್ಸೆನೋವ್ "ನಾನು ದೈವ ಸಾಕ್ಷಿಯಾಗಿಯೂ ಅಂತಹ ಅಪರಾಧವನ್ನು ಮಾಡಿಲ್ಲ. ನಾನು ಆ ವ್ಯಾಪಾರಿಯೊಡನೆ ಚಾ ಸೇವಿಸಿದ ನಂತರ ಆತನನ್ನು ನೋಡಲಿಲ್ಲ. ನನ್ನೊಡನೆ ಇರುವ ಹಣವೆಲ್ಲಾ ನನ್ನದೇ ಆಗಿದೆ. ಈ ಚೂರಿ ನನ್ನದಲ್ಲ." ಆದರೆ ಆತನ ಸ್ವರ ನಡುಗುತ್ತಿತ್ತು. ಮುಖ ಬಾಡಿ ಹೋಗಿತ್ತು. ಆತನು ತಪ್ಪಿತಸ್ಥನೋ ಎಂಬಂತೆ ಅವನ ಶರೀರ ನಡುಗುತ್ತಿತ್ತು.

ಪೋಲೀಸ್ ಅಧಿಕಾರಿಯು ಆಕ್ಸೆನೋವನ್ನು ಬಂಧಿಸಿ ಗಾಡಿಯಲ್ಲಿ ಹಾಕುವಂತೆ ಸೈನಿಕರೊಡನೆ ಹೇಳಿದನು. ಸೈನಿಕರು ಆತನ ಕೈಕಾಲುಗಳನ್ನು ಕಟ್ಟಿ ಗಾಡಿಯೊಳಕ್ಕೆಸೆದರು. ಆಕ್ಸೆನೋವ್ ದೇವರನ್ನು ಪ್ರಾರ್ಥಿಸಿ ಕಣ್ಣೀರು ಸುರಿಸಿದನು. ಅಧಿಕಾರಿಗಳು ಆತನ ಹಣವನ್ನೂ ವಸ್ತುಗಳನ್ನೂ ಅವನಿಂದ ವಸೂಲು ಮಾಡಿ ಆತನನ್ನು ಹತ್ತಿರದ ಒಂದು ಜೈಲಿನಲ್ಲಿ ಹಾಕಿದರು. ಆತನ ಗುಣ ನಡತೆಗಳ ಕುರಿತು ಆತನ ಊರಾದ ವ್ಲಾಡಿಮೂರಿನಲ್ಲಿ ವಿಚಾರಿಸಿದರು. ಅಲ್ಲಿನ ವ್ಯಾಪಾರಿಗಳೂ, ಇತರ ನಿವಾಸಿಗಳೂ, ಆತನಿಗೆ ಚಿಕ್ಕಂದಿನಲ್ಲಿ ಕುಡಿಯುವ ಅಭ್ಯಾಸವಿದ್ದರೂ ಅನಂತರ ಬಹಳ ಒಳ್ಳೆಯ ಮನುಷ್ಯನಾಗಿರುವನೆಂದೂ ಹೇಳಿದರು. ಆದರೆ ಆತನ ಮೇಲೆ ಕೊಲೆಯ ಅಪಾದನೆ ಹೊರಿಸಿ ವಿಚಾರಣೆಗೆ ಗುರಿಪಡಿಸಲಾಯಿತು.

ಆಕ್ಸೆನೋವಿನ ಹೆಂಡತಿಯು ನಿರಾಶಳಾಗಿದ್ದಳು. ಅವಳಿಗೆ ಏನನ್ನು ನಂಬಬೇಕೆಂದು ತೋರಲಿಲ್ಲ. ಅವಳ ಮಕ್ಕಳೆಲ್ಲಾ ಬಹಳ ಚಿಕ್ಕವುಗಳು, ಒಂದು, ಮೊಲೆ ಕುಡಿಯುವ ಕೂಸಾಗಿತ್ತು. ಈ ಎಲ್ಲಾ ಮಕ್ಕಳನ್ನು ಕೂಡಿಕೊಂಡು ಅವಳು ತನ್ನ ಗಂಡನಿರುವ ಸೆರೆಮನೆಗೆ ಹೋದಳು. ಪ್ರಾರಂಭದಲ್ಲಿ ಆತನನ್ನು ನೋಡುವುದಕ್ಕೆ ಅವಳಿಗೆ ಪ್ರವೇಶ ದೊರೆಯಲಿಲ್ಲ. ಕೊನೆಗೆ ಬಹುವಾಗಿ ನಮ್ರ ವಿನಂತಿ ಮಾಡಿ ಅವಳಿಗೆ, ಕೊನೆಗೆ ಪ್ರವೇಶ ಸಿಕ್ಕಿತು. ತನ್ನ ಪ್ರಿಯನು ಕಳ್ಳರೊಂದಿಗೂ ಕೊಲೆಗಡುಕರೊಂದಿಗೂ, ಬಂಧಿತನಾಗಿರುವುದನ್ನು ನೋಡಿ ಸ್ಮೃತಿ ತಪ್ಪಿಬಿದ್ದಳು. ತುಂಬಾ ಹೊತ್ತಿನ ನಂತರ ಅವಳಿಗೆ ಎಚ್ಚರವಾಯಿತು. ಮಕ್ಕಳೊಂದಿಗೆ ಆತನ ಸಮೀಪಕ್ಕೆ ಬಂದು ಕುಳಿತುಕೊಂಡಳು. ಮನೆಯ ವಿಚಾರಗಳನ್ನೆಲ್ಲಾ ಗಂಡನೊಡನೆ ಹೇಳಿದನಂತರ ಆತನ ವಿಚಾರಗಳನ್ನು ಪ್ರಶ್ನಿಸಿದಳು. ಆತನು ಎಲ್ಲಾ ವಿಚಾರವನ್ನೂ ಹೇಳಿದನು. "ಈಗ ನಾವೇನು ಮಾಡಬಲ್ಲೆವು? ಒಬ್ಬ ನಿರಪರಾಧಿಯನ್ನು ಶಿಕ್ಷಿಸದಂತೆ ಝಾರನಿಗೆ ಮನವಿ ಮಾಡಿಕೊಳ್ಳಬೇಕು."

ತಾನು 'ಝಾರ'ನಿಗೊಂದು ಮನವಿಯನ್ನರ್ಪಿಸಿರುವೆನೆಂದೂ ಅದು ಸ್ವೀಕರಿಸಲ್ಪಡಲಿಲ್ಲವೆಂದೂ ಹೆಂಡತಿ ಹೇಳಿದಳು.

ಅಕ್ಸೆನೋವ್ ಏನೊಂದೂ ಉತ್ತರವನ್ನು ಹೇಳದೆ ಮೌನದಿಂದ ನೆಲವನ್ನೇ ನೋಡುತ್ತಾ ನಿಂತುಕೊಂಡನು.

ಆಗ ಹೆಂಡತಿ—"ಅಂದು ನನಗೆ ಕಂಡ ಕನಸು ಸುಮ್ಮನಾಯಿತೇ? ಅಂದು ನೀವು ಸಂತೆಗೆ ಹೊರಟಾಗ ನಾನು ಕನಸಿನ ವಿಚಾರ ಹೇಳಿದುದು ನಿಮಗೆ ನೆನಪಿದೆಯೇ? ಅಂದು ನೀವು ಹೊರಡಬಾರದಿತ್ತು." ಅನಂತರ ತನ್ನ ಕೈಯಿಂದ ಗಂಡನ ತಲೆಯನ್ನು ಸವರುತ್ತಾ ಕೇಳಿದಳು: "ಪ್ರಿಯತಮಾ, ನನ್ನೊಡನೆ ನಿಜ ಹೇಳಿರಿ ಈ ಕೃತ್ಯವನ್ನು ಮಾಡಿದವರು ನೀವಲ್ಲವಲ್ಲಾ ?"

"ಹಾ, ನಿನಗೂ ಕೂಡ ನನ್ನಲ್ಲಿ ಸಂಶಯವೆ!" ಎಂದು ಹೇಳುತ್ತಾ ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅಕ್ಸೆನೋವನು ಅತ್ತನು. ಇಷ್ಟರಲ್ಲಿ ಪೋಲಿಸರು ಬಂದು ಹೆಂಡತಿಯನ್ನು ಹೊರಹೋಗುವಂತೆ ಹೇಳಿದರು. ಅಕ್ಸೆನೋವನು ತನ್ನ ಹೆಂಡತಿ ಮಕ್ಕಳಿಗೆ ಅಂತಿಮ ಪ್ರೇಮವನ್ನರ್ಪಿಸಿದನು.

ಅವರು ಹೋದನಂತರ ಅಕ್ಸೆನೋವನು ಎಲ್ಲಾ ವಿಚಾರಗಳನ್ನೂ ನೆನಪು ಮಾಡಿಕೊಂಡನು. ತನ್ನ ಹೆಂಡತಿಗೂ ತನ್ನಲ್ಲಿ ಸಂಶಯ ಬಂದಿತ್ತೆಂಬುದನ್ನು ಗ್ರಹಿಸಿ ತನ್ನಲ್ಲೇ ಹೀಗೆಂದುಕೊಂಡನು: "ದೇವರಿಗೆ ಮಾತ್ರ ನಿಜ ತಿಳಿಯಲು ಸಾಧ್ಯವಿದೆಯಷ್ಟೆ. ಅವನ ದಯೆಗಾಗಿ ಅವನನ್ನು ಪ್ರಾರ್ಥಿಸಿಕೊಳ್ಳಬೇಕಷ್ಟೆ.'' ಅನಂತರ ಅಕ್ಸೆನೋವನು ಯಾರಿಗೂ ಯಾವುದೇ ರೀತಿಯ ಮನವಿಗಳನ್ನರ್ಪಿಸಲಿಲ್ಲ. ಎಲ್ಲಾ ಆಶೆಗಳನ್ನು ತೊರೆದು ದೇವರನ್ನು ಪ್ರಾರ್ಥಿಸಿದನು.

ಅಕ್ಸೆನೋವನಿಗೆ ಬಲವಾದ ಏಟುಗಳು ಬಿದ್ದವು. ಮೈಯೆಲ್ಲಾ ಪೆಟ್ಟಿನ ಗಾಯಗಳಾದುವು. ಈ ಗಾಯಗಳೆಲ್ಲಾ ಮಾಸಿದಾಗ ಆತನನ್ನು ಇತರ ಅಪರಾಧಿಗಳೊಡನೆ ಜೀವಾವಧಿ ಶಿಕ್ಷೆಯನ್ನನುಭವಿಸುವುದಕ್ಕಾಗಿ ಸೈಬಿರೀಯಕ್ಕೆ ಕಳುಹಿದರು.

ಸೈಬಿರೀಯದಲ್ಲಿ ಇತರ ಕೈದಿಗಳೊಡನೆ ಇಪ್ಪತ್ತಾರು ವರ್ಷಗಳ ಶಿಕ್ಷೆಯನ್ನನುಭವಿಸಿದನು. ಇಷ್ಟರಲ್ಲಿ ಆತನ ಕೂದಲುಗಳು ಹಿಮದಷ್ಟು ಬಿಳುಪಾಗಿದ್ದುವು. ಗಡ್ಡ ಬಹಳ ಉದ್ದವಾಗಿ ಬೆಳೆದಿತ್ತು. ಆತನ ವಿನೋದವೆಲ್ಲಾ ಮಾಯವಾಗಿತ್ತು. ಬೆನ್ನು ಬಾಗಿತ್ತು. ಮೆಲ್ಲನೆ ನಡೆಯುತ್ತಿದ್ದನು. ಬಹಳ ಕಡಿಮೆ ಮಾತುಗಳನ್ನಾಡುತ್ತಿದ್ದನು. ಒಮ್ಮೆಯೂ ನಗಾಡುತ್ತಿರಲಿಲ್ಲ. ಹೆಚ್ಚಾಗಿ ಪ್ರಾರ್ಥನೆಯಲ್ಲೇ ಸಮಯ ಕಳೆಯುತ್ತಿದ್ದನು.

ಜೈಲಿನಲ್ಲಿ ಆತನು ಬೂಟ್ಸ್ ತಯಾರಿಸುವ ಉದ್ಯೋಗವನ್ನಭ್ಯಸಿಸಿದನು. ಅದರಿಂದ ಸ್ವಲ್ಪ ಹಣವನ್ನು ಸಂಪಾದಿಸಿದನು. ಈ ಹಣದಿಂದ ಪುಣ್ಯಪುರುಷರ ಜೀವನ ಚರಿತ್ರೆಯುಳ್ಳ ಪುಸ್ತಕವನ್ನು ಪಡಕೊಂಡನು. ಜೈಲಿನಲ್ಲಿ ಸಾಕಷ್ಟು ಬೆಳಕಿದ್ದಾಗ ಈ ಪುಸ್ತಕವನ್ನೋದುತ್ತಿದ್ದನು. ಆದಿತ್ಯವಾರಗಳಲ್ಲಿ ಜೈಲಿನ ಇಗರ್ಜಿಯಲ್ಲಿ ಕ್ರೈಸ್ತನ ಕುರಿತು ಹಾಡುತ್ತಿದ್ದನು. ಅವನ ಸ್ವರ ಇನ್ನೂ ಚೆನ್ನಾಗಿತ್ತು.

ಅಕ್ಸೆನೋವಿನ ಸದ್ಗುಣಗಳಿಗಾಗಿ ಜೈಲಿನ ಅಧಿಕಾರಿಗಳು ಆತನನ್ನು ಮೆಚ್ಚುತ್ತಿದ್ದರು. ಅವನೊಂದಿಗಿರುವ ಇತರ ಖೈದಿಗಳು ಅವನನ್ನು ಗೌರವಿಸುತ್ತಿದ್ದರು.

ಆತನನ್ನು ವೃದ್ಧಪಿತಾಮಹನೆಂದೂ, ಮಹಾಪುರುಷನೆಂದೂ ಕರೆಯುತ್ತಿದ್ದರು. ಅಪರಾಧಿಗಳು ತಮ್ಮ ಸಂಕಷ್ಟಗಳ ಕುರಿತು ಜೈಲಿನ ಮೇಲಧಿಕಾರಿಗಳಿಗೆ ಏನಾದರೂ ಮನವಿಯನ್ನರ್ಪಿಸಬೇಕಾಗಿ ಬಂದಲ್ಲಿ ಈತನನ್ನೇ ಮುಂದೆ ಮಾಡುತಿದ್ದರು. ಕೈದಿಗಳೊಳಗೆ ಏನಾದರೂ ಜಗಳವಾದಲ್ಲಿ ಅದರ ತೀರ್ಮಾನಕ್ಕೆ ಈತನಲ್ಲಿಗೆ ಬರುತ್ತಿದ್ದರು.

ಅಕ್ಸೆನೋವಿಗೆ ತನ್ನ ತಾಯ್ನಾಡಿಂದ ಯಾವ ವರ್ತಮಾನಗಳೂ ಬರುತ್ತಿರಲಿಲ್ಲ. ತನ್ನ ಹೆಂಡತಿ ಮಕ್ಕಳು ಜೀವಂತವಾಗಿರುವರೋ ಎಂಬುದನ್ನು ಆತ ತಿಳಿದಿರಲಿಲ್ಲ.

ಒಂದು ದಿನ ಕೈದಿಗಳ ಒಂದು ಹೊಸ ತಂಡವು ಆತನಿರುವ ಸೆರೆಮನೆಗೆ ಬಂತು. ಆ ದಿನ ಸಾಯಂಕಾಲ ಹಳೆಯ ಕೈದಿಗಳೆಲ್ಲಾ ಹೊಸಬರ ಪರಿಚಯ ಮಾಡಿಕೊಂಡರು. ಯಾವ ಪಟ್ಟಣ ಅಥವಾ ಗ್ರಾಮದಿಂದ ಯಾವ ಕಾರಣಕ್ಕಾಗಿ ಬಂದುದೆಂದೂ ವಿಚಾರಿಸಿದರು. ಇತರರೊಡನೆ ಅಕ್ಸೆನೋವನೂ ಹೊಸ ಕೈದಿಗಳೊಂದಿಗೆ ಕುಳಿತುಕೊಂಡು ಅವರು ಹೇಳುವ ವಿಚಾರಗಳನ್ನು, ಬೇಸರದಿಂದ ಕೇಳುತ್ತಿದ್ದನು.

ಕೈದಿಗಳಲ್ಲೊಬ್ಬನು ದೀರ್ಘಕಾಯನೂ, ಬಲಶಾಲಿಯೂ ಆಗಿದ್ದನು. ಆತನು ತನ್ನ ಬಂಧನದ ವಿಚಾರವಾಗಿ ಹೀಗೆಂದನು: "ಸ್ನೇಹಿತರೇ, ನಾನು ಲಾಯದಲ್ಲಿ ಕಟ್ಟಿದ್ದ ನನ್ನ ಸ್ನೇಹಿತನ ಕುದುರೆಯೊಂದನ್ನು ಬಿಚ್ಚಿಕೊಂಡು ಹೋದುದಕ್ಕಾಗಿ ಕಳ್ಳತನದ ಅಪಾದನೆ ಹೊರಿಸಿ ನನ್ನನ್ನು ಬಂಧಿಸಿದರು. ನಾನು ಬೇಗನೆ ಮನೆಯನ್ನು ತಲುಪುವುದಕ್ಕಾಗಿ ಮಾತ್ರ ಕುದುರೆಯನ್ನುಪಯೋಗಿಸಿದುದಾಗಿ ಹೇಳಿದೆನು. ಆದರೆ ನನ್ನ ಮಾತನ್ನು ಗಮನಿಸದೆ ನನ್ನ ಮೇಲೆ ಕಳ್ಳತನದ ಆರೋಪ ಹೊರಿಸಿದರು. ಆದರೆ ಎಲ್ಲಿ ಹೇಗೆ ನಾನು ಕುದುರೆಯನ್ನಪಹರಿಸಿದುದೆಂದು ಹೇಳಲಸಮರ್ಥರಾದರು. ಒಮ್ಮೆ ನಾನು ನಿಜವಾಗಿ ಒಂದು ದೊಡ್ಡ ತಪ್ಪನ್ನು ಮಾಡಿದ್ದೆ. ಅಂದೇ ನಾನು ಇಲ್ಲಿಗೆ ಬರಬೇಕಿತ್ತು. ಆದರೆ ನನ್ನ ಪತ್ತೆಯಾಗಲಿಲ್ಲ. ಈ ಬಾರಿ ಮಾತ್ರ ನನ್ನನ್ನು ನಿಷ್ಕಾರಣವಾಗಿ ಇಲ್ಲಿಗೆ ಕಳುಹಿಸಿದ್ದಾರೆ....ಒಂದು ವಿಚಾರ.... ನಾನು ಮೊದಲೊಮ್ಮೆ ಖೈದಿಯಾಗಿ ಸೈಬೀರಿಯಕ್ಕೆ ಬಂದಿದ್ದೆ. ಆದರೆ ಹೆಚ್ಚು ಕಾಲ ಇಲ್ಲಿ ಉಳಿಯಲಿಲ್ಲ."

"ನೀನು ಎಲ್ಲಿಂದ ಬಂದವನು?" ಒಬ್ಬ ಕೈದಿ ಕೇಳಿದನು.

"ನಾನು ವ್ಲಾಡಿಮಾರ್ ನಗರದವನು. ನನ್ನ ಮನೆ ಕುಟುಂಬ ಎಲ್ಲ ಅಲ್ಲಿ ಇದೆ. ನನ್ನ ಹೆಸರು ಮಕಾರ್. ಜನರು ನನ್ನನ್ನು 'ಸೆಮನಿಚ್' ಎಂದು ಕರೆಯುತ್ತಾರೆ" ಹೊಸ ಕೈದಿ ಹೇಳಿದ. ವ್ಲಾಡಿಮಾರ್ ಪಟ್ಟಣದ ಹೆಸರನ್ನು ಕೇಳಿದೊಡನೆ ಅಕ್ಸೆನೋವನು ತಲೆಯೆತ್ತಿದನು. ಅಕ್ಸೆನೋವ್: "ಸೆಮನಿಚ್, ವ್ಲಾಡಿಮಾರಿನ ಅಕ್ಸೆನೋವ್ ಕುಟುಂಬದವರ ವಿಚಾರ ನಿನಗೇನಾದರೂ ತಿಳಿದಿದೆಯೇ? ಅವರು ಇನ್ನೂ ಜೀವಂತರಾಗಿದ್ದಾರೆಯೇ?" ಎಂದು ಕೇಳಿದನು.

ಸೆಮುನಿಚ್: "ಅವರ ವಿಚಾರ ಚೆನ್ನಾಗಿ ಗೊತ್ತುಂಟು. ಅವರೆಲ್ಲಾ ಬಹಳ ಐಶ್ವರ್ಯವಂತರಾಗಿದ್ದಾರೆ. ಆದರೆ, ಅವರ ತಂದೆ ಮಾತ್ರ ನಮ್ಮಂತೆಯೇ ಅಪರಾಧಿತನಾಗಿ ಪಾಪಿಯಾಗಿ ಸೈಬೀರಿಯದಲ್ಲಿ ಎಲ್ಲಿಯೋ ನರಳುತ್ತಿದ್ದಾನೆ. ಆದರೆ, ಪಿತಾಮಹನೇ, ನೀನು ಇಲ್ಲಿ ಬರುವುದಕ್ಕೆ ಕಾರಣವೇನು?"

ತನ್ನ ದುರ್ದಶೆಯ ಕುರಿತು ಏನು ಹೇಳುವುದಕ್ಕೂ ಆತನಿಷ್ಟಪಡಲಿಲ್ಲ. ಕೇವಲ ನಿಟ್ಟುಸಿರನ್ನು ಮಾತ್ರ ಬಿಟ್ಟು "ನನ್ನ ಪಾಪಗಳಿಗಾಗಿ ಇಪ್ಪತ್ತಾರು ವರ್ಷಗಳಿಂದ ಇಲ್ಲಿ ನರಳುತ್ತಿದ್ದೇನೆ" ಎಂದಿಷ್ಟೇ ಹೇಳಿದನು.

"ಎಂತಹ ಪಾಪಗಳು?" ಸೆಮುನಿಚ್ ಕೇಳಿದನು

ಆದರೆ ಅಕ್ಸೆನೋವ್ "ಒಳ್ಳೆಯದು. ನಾನು ಈ ಶಿಕ್ಷೆಗೆ ಬಹುಶಃ ಅರ್ಹನಾಗಿದ್ದೇನೆ!'' ಎಂದನು ಇನ್ನು ಮುಂದೆ ಆತನು ಹೇಳುವುದಕ್ಕೂ ಇಷ್ಟಪಡಲಿಲ್ಲ. ಆದರೆ, ಆತನ ಒಡನಾಡಿಗಳು ಆತನು ಸೈಬೀರಿಯಕ್ಕೆ ಬಂದ ಬಗೆಯನ್ನು ಹೊಸಬನಿಗೆ ಹೇಳಿದರು. ಯಾರೋ, ಒಬ್ಬ ವ್ಯಾಪಾರಿಯನ್ನು ಕೊಲೆಮಾಡಿ ಈತನ ಚೀಲದಲ್ಲಿ ರಕ್ತಲೇಪಿತ ಚೂರಿಯನ್ನಡಗಿಸಿಟ್ಟು ಪರಾರಿಯಾಗಿದ್ದರು. ಅದರಿಂದ ಇವನು ಅನ್ಯಾಯವಾಗಿ ಕೈದಿಯಾದನೆಂದು ತಿಳಿಸಿದರು.

ಮಕಾರ್ ಸೆಮುನಿಚ್ಚನು ಇದನ್ನು ಕೇಳಿದೊಡನೆ ಬಹಳ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ "ಇದು ಆಶ್ಚರ್ಯ! ನಿಜವಾಗಿಯೂ ಆಶ್ಚರ್ಯ! ಆದರೆ, ಪಿತಾಮಹನೇ, ನೀನೆಷ್ಟು ಮುದುಕನಾಗಿದ್ದಿ!'' .

ಕೈದಿಗಳು ಕೇಳಿದರು: ''ನೀನು ಆಶ್ಚರ್ಯಪಡುವುದಕ್ಕೆ ಕಾರಣವೇನು? ಅಕ್ಸೆನೋವನ್ನು ಈ ಮೊದಲು ನೋಡಿರುವೆಯಾ?'' ಆದರೆ ಸೆಮುನಿಚ್ ಉತ್ತರಿಸಲಿಲ್ಲ. ಮಾತುಗಳನ್ನು ಬೇರೆ ವಿಚಾರಗಳಿಗೆ ತಿರುಗಿಸಿದನು.

ಇದರಿಂದಲಾಗಿ ಬಹುಶಃ ಈತನಿಗೆ ವ್ಯಾಪಾರಿಯನ್ನು ಕೊಲೆ ಮಾಡಿದವನಾರೆಂದು ತಿಳಿದಿರಬಹುದೋ ಎಂಬ ಸಂಶಯವಾಯಿತು.

ಅಕ್ಸೆನೋವ್: "ಸೆಮೆನಿಚ್, ನೀನು ಬಹುಶಃ ವ್ಯಾಪಾರಿಯ ಕೊಲೆಯ ವಿಚಾರ ಕೇಳಿ ತಿಳಿದಿರಬಹುದು ಅಥವಾ ನನ್ನನ್ನು ಈ ಮೊದಲು ನೋಡಿರುವೆಯಾ?"

ಸೆಮುನಿಚ್: "ಆ ಘಟನೆಯನ್ನು ತಿಳಿಯದಿರುವುದು ಸಾಧ್ಯವೇ ಇಲ್ಲ. ಅದು ಲೋಕದಲ್ಲೆಲ್ಲಾ ಜನಜನಿತವಾದ ವಿಚಾರ. ಆದರೆ ಘಟನೆಯು ಎಂದೋ ನಡೆದು ಹೋದುದರಿಂದ ಕೇಳಿದ ಎಲ್ಲಾ ವಿವರಗಳೂ ಮರೆತುಹೋಗಿವೆ.''

''ವ್ಯಾಪಾರಿಯನ್ನು ನಿಜವಾಗಿ ಖೂನಿಮಾಡಿದವನಾರೆಂದು ಕೇಳಿರುವೆಯಾ?" ಅಕ್ಸೆನೋವ್ ಕೇಳಿದ.

ಮಕಾರ್ ಸೆಮೆನಿಚ್ ನಗಾಡುತ್ತಾ ಹೇಳಿದ:"ಯಾರ ಚೀಲದಲ್ಲಿ ರಕ್ತಲೇಪಿತ ಚೂರಿಯಿತ್ತೋ ಆತನೇ ಕೊಲೆ ಮಾಡಿರಬೇಕು. ಇನ್ನಾರಾದರೂ ಕೊಲೆ ಮಾಡಿ ನಿನ್ನ ಚೀಲದಲ್ಲಿ ಚೂರಿಯನ್ನಡಗಿಸಿದ್ದರೆ ಆತನು ಪತ್ತೆಯಾಗುವ ತನಕ ಆತನು

ಆತನು ಕಳ್ಳನಲ್ಲ. ನಿನ್ನ ಚೀಲವನ್ನು ನಿನ್ನ ತಲೆಯಡಿಯಲ್ಲಿಟ್ಟುಕೊಂಡಿದ್ದಾಗ ನಿನಗೆ ಎಚ್ಚರವಾಗದೆ ಇನ್ನೊಬ್ಬನು ನಿನ್ನ ಚೀಲದಲ್ಲಿ ಚೂರಿಯನ್ನಡಗಿಸುವುದೆಂತು?"

ಈ ಮಾತುಗಳನ್ನು ಕೇಳಿದಾಗ ಈತನೇ ವ್ಯಾಪಾರಿಯನ್ನು ಖೂನಿ ಮಾಡಿದನೆಂದು ಆಕ್ಸೆನೋವನಿಗೆ ಖಚಿತವಾಯಿತು. ಆಕ್ಸೆನೋವ್ ಅಲ್ಲಿ ನಿಲ್ಲದೆ ಬೇರೊಂದೆಡೆಗೆ ಹೋದನು. ಆ ರಾತ್ರಿ ಇಡೀ ನಿದ್ದೆ ಹತ್ತಲಿಲ್ಲ. ಆತನು ಬಹಳವಾಗಿ ನೊಂದುಕೊಂಡನು. ಅನೇಕ ಭಾವನೆಗಳು ಅವನ ಮನಸ್ಸಿನಲ್ಲಿ ಮೂಡಿಬಂದವು. ಕಳೆದು ಹೋದ ನೆನಪುಗಳು ಒಂದೊಂದಾಗಿ ಆತನಿಗಾದುವು. ತಾನು ಅಂದು ಸಂತೆಗೆ ಹೊರಟಾಗ ಹೆಂಡತಿಯು ಹೇಳಿದ ಮಾತುಗಳು, ತನ್ನ ಪ್ರಿಯತಮೆಯ ಸುಂದರ ರೂಪ, ಸವಿಮಾತುಗಳು, ಮಕ್ಕಳ ಮುದ್ದು ಮುಖಗಳು, ಅವರ ತೊದಲ್ನುಡಿಗಳು ಇವುಗಳೆಲ್ಲಾ ಒಂದೊಂದಾಗಿ ಮನಸ್ಸಿಗೆ ಬಂದು ಮಾಯವಾದುವು. ಅನಂತರ ತನ್ನ ಹಿಂದಿನ ಜೀವನದ ಘಟನೆಗಳು ಒಂದೊಂದಾಗಿ ಚಲಚ್ಚಿತ್ರದಂತೆ ಮನಸ್ಸಿಗೆ ಹೊಳೆದವು. ತಾನು ನಿಶ್ಚಿಂತನಾಗಿ ಕುಳಿತು ವೀಣೆಯನ್ನು ನುಡಿಸುತ್ತಿದ್ದಾಗ ತನ್ನನ್ನು ಬಂಧಿಸಿದ ರೀತಿ, ತನಗೆ ಜಲವಾದ ಏಟುಗಳು ಬಿದ್ದ ಸ್ಥಳ ಮೊದಲಾದ ಘಟನೆಗಳಿಂದ ಪ್ರಾರಂಭವಾಗಿ ತನ್ನ ಇಪ್ಪತ್ತಾರು ವರುಷಗಳ ಸೆರೆಮನೆವಾಸದ ಅನುಭವದ ನೆನಪುಗಳೆಲ್ಲವೂ ಒಂದೊಂದಾಗಿ ಆತನಿಗಾದುವು ಈ ಎಲ್ಲಾ ಆಲೋಚನೆಗಳು ತುಂಬಿದಾಗ ಆ ನಿರ್ಭಾಗ್ಯನು ಆತ್ಮಹತ್ಯೆ ಮಾಡಿಕೊಳ್ಳಲೂ ತಯಾರಾದನು.

ಇಷ್ಟೆಲ್ಲಾ ಸಂಕಷ್ಟಗಳಿಗೆ ಈ ನೀಚನೇ ಕಾರಣನೆಂದು ಆತನು ಆಲೋಚಿಸಿದನು. ಸೆಮುನಿಚ್ಚನ ಮೇಲೆ ಆತನಿಗುಂಟಾದ ದ್ವೇಷ ಅಷ್ಟಿಷ್ಟಲ್ಲ. ತಾನು ಸತ್ತರೂ ಚಿಂತೆಯಿಲ್ಲ. ಈ ಸೇಡನ್ನು ತೀರಿಸಿಯೇ ಬಿಡಬೇಕೆಂಬ ಆಲೋಚನೆಯಾಯಿತು. ರಾತ್ರಿಯಿಡೀ ಪ್ರಾರ್ಥನೆಯಲ್ಲೇ ಕಳೆದನು. ಆದರೂ ಶಾಂತಿ ದೊರೆಯಲಿಲ್ಲ. ಹಗಲಿನಲ್ಲಿ ಸೆಮುನಿಚ್ಚನ ಸಮೀಪಕ್ಕೆ ಹೋಗಲೂ ಇಲ್ಲ. ಆತನನ್ನು ನೋಡಲೂ ಇಲ್ಲ.

ಹೀಗೆ ಹದಿನಾಲ್ಕು ದಿನಗಳು ಸಂದುಹೋದುವು. ರಾತ್ರಿಗಳಲ್ಲಿ ಆಕ್ಸೆನೋವಿಗೆ ನಿದ್ದೆ ಹತ್ತುತ್ತಿರಲಿಲ್ಲ. ಆತನ ದುಃಖ ಅದರ ಉಚ್ಚಸ್ಥಾನವನ್ನು ಮುಟ್ಟಿತ್ತು. ಆತನಿಗೆ ಏನು ಮಾಡಬೇಕೆಂದು ತೋಚಲಿಲ್ಲ.

ಹೀಗೆ ನಿದ್ದೆಯಿಲ್ಲದೆ ಒಂದು ರಾತ್ರಿ ಆತನು ಜೈಲಿನಲ್ಲಿ ನಡೆಯುತ್ತಿರುವಾಗ ಕೈದಿಗಳು ಮಲಗುವ ಹಲಗೆಯೊಂದರಡಿಯಿಂದ ಕೊರೆದ ಮಣ್ಣು ಹೊರಬರುತ್ತಿರುವುದನ್ನು ನೋಡಿದನು. ಇದೇನಾಗಿರಬಹುದೆಂದು ನೋಡುವುದಕ್ಕಾಗಿ ನಿಂತನು. ಕೂಡಲೇ "ಸೆಮುನಿಚ್ಚ"ನು ಹಲಗೆಯಡಿಯಿಂದ ಮೇಲಕ್ಕೆ ಬಂದು ಹೆದರಿಕೆಯಿಂದ ಆಕ್ಸೆನೋವನ್ನು ನೋಡಿದನು. ಆಕ್ಸೆನೋವನು ಆತನನ್ನು ನೋಡದವನಂತೆ

ಮುಂದಕ್ಕೆ ಹೋಗಲುದ್ಯುಕ್ತನಾದನು. ಆದರೆ ಸೆಮನಿಚ್ ಆತನ ಕೈಯನ್ನು ಹಿಡಿದು ನಿಲ್ಲಿಸಿ ಹೀಗೆಂದನು: "ನಾನು ಗೋಡೆಯ ಕೆಳಗಡೆ ಒಂದು ಸುರಂಗವನ್ನು ಕೊರೆಯುತ್ತಿರುವೆನು. ಪ್ರತಿದಿನವೂ ಮಣ್ಣನ್ನು ಬೂಡ್ಸಿನಲ್ಲಿ ತುಂಬಿಸಿ ನಮ್ಮನ್ನೆಲ್ಲ ಕೆಲಸಕ್ಕಾಗಿ ಹೊರಬಿಡುವಾಗ ಮಾರ್ಗದ ಬದಿಯಲ್ಲಿ ಅದನ್ನು ಚೆಲ್ಲುತ್ತಿರುವೆನು. ದಯಮಾಡಿ ಈ ವಿಚಾರವನ್ನು ಯಾರಿಗೂ ತಿಳಿಸಬೇಡ. ನೀನೂ ಕೂಡ ಈ ಮಾರ್ಗವಾಗಿ ತಪ್ಪಿಸಿಕೊಳ್ಳಬಹುದು. ಈ ವಿಚಾರ ಎಲ್ಲಿಯಾದರೂ ತಿಳಿದರೆ ಅಧಿಕಾರಿಗಳು ನನ್ನನ್ನು ಸಾಯುವ ತನಕ ಹೊಡೆಯುವುದು ನಿಶ್ಚಯ. ಆದರೆ ಅದಕ್ಕಿಂತ ಮೊದಲು ನಿನ್ನನ್ನು ಕೊಲ್ಲುವೆನು."

ತನ್ನ ವೈರಿಯನ್ನು ನೋಡಿ ಅಕ್ಸೆನೋವ್ ಸಿಟ್ಟಿನಿಂದ ನಡುಗುತ್ತಿದ್ದನು. ಆತನು ತನ್ನ ಕೈಯನ್ನು ಆತನ ಹಿಡಿತದಿಂದ ಬಿಡಿಸುತ್ತಾ 'ನನಗೆ ಜೈಲಿನಿಂದ ತಪ್ಪಿಸಿಕೊಳ್ಳುವ ಆಶೆಯೇ ಇಲ್ಲ. ನೀನು ನನ್ನನ್ನು ಈಗ ಕೊಲ್ಲುವ ಅಗತ್ಯವೇ ಇಲ್ಲ. ನೀನು ನನ್ನನ್ನು ಅನೇಕ ವರ್ಷಗಳ ಹಿಂದೆಯೇ ಕೊಲೆ ಮಾಡಿರುವಿ. ನಿನ್ನ ಈ ವಿಚಾರವನ್ನು ಅಧಿಕಾರಿಗಳಿಗೆ ತಿಳಿಸುವ ಕುರಿತು ನಾನೀಗ ಹೇಳಲಾರೆ. ದೇವರ ಪ್ರೇರಣೆಯಂತೆ ನಡೆಯುವೆನು."

ಮರುದಿನ ಕೈದಿಗಳನ್ನು ಕೆಲಸಕ್ಕಾಗಿ ಕೊಂಡೊಯ್ಯುವಾಗ ಬೂಟ್ಸಿನಿಂದ ಚೆಲ್ಲಿದ ಮಣ್ಣು ಕಂಡು ಬಂತು. ಕೂಡಲೇ ಜೈಲನ್ನು ಹುಡುಕಿ ಸುರಂಗವನ್ನು ಕಂಡುಹಿಡಿದರು. ಜೈಲಿನ ಗವರ್ನರನು ಬಂದು ಈ ಕುರಿತು ಎಲ್ಲರನ್ನು ಪ್ರಶ್ನಿಸಿದನು. ಆದರೆ ಎಲ್ಲರೂ ತಮಗೆ ಈ ವಿಚಾರ ತಿಳಿದಿಲ್ಲವೆಂದುತ್ತರಿಸಿದರು. ಕಡೆಗೆ ಗವರ್ನರನು, ನ್ಯಾಯವಂತನೂ, ಸತ್ಯವಂತನೂ ಆದ ಅಕ್ಸೆನೋವಿನೊಡನೆ ಈ ವಿಚಾರವನ್ನು ಕೇಳಿದನು. ಸೆಮನಿಚ್ಚನು ಏನೂ ತಿಳಿಯದವನಂತೆ ನಟಿಸುತಿದ್ದನು. ತನ್ನನ್ನು ಪ್ರಶ್ನಿಸಿದೊಡನೆ ಅಕ್ಸೆನೋವಿನ ತುಟಿಗಳೂ ಕೈಗಳೂ ನಡುಗ ತೊಡಗಿದುವು. ಆತನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಆತನು ತನ್ನಲ್ಲೆ ಆಲೋಚಿಸಿದನು: "ನನ್ನ ಜೀವನವನ್ನೇ ನಾಶಮಾಡಿದ ಆತನ ಹೆಸರನ್ನೇಕೆ ಅಡಗಿಸಬೇಕು? ತಾನು ಕಷ್ಟಪಟ್ಟದ್ದಾಗಿದೆ. ಆತನೂ ಕಷ್ಟಪಡಲಿ!....ಆದರೆ ನಾನೀಗ ಆತನನ್ನು ತೋರಿಸಿಕೊಟ್ಟರೆ ಆತನನ್ನು ಸಾಯುವ ತನಕ ಹೊಡೆಯುವರು. ಒಂದು ವೇಳೆ ನನಗೆ ಆತನಲ್ಲಿರುವ ಸಂಶಯ ನಿಜವಲ್ಲದಿರಲೂ ಬಹುದು. ಅವನ ಹೆಸರನ್ನು ಸೂಚಿಸುವುದರಿಂದ ನನಗೇನು ಲಾಭ?"

"ವೃದ್ಧನೇ, ನಿಜ ಹೇಳು. ಯಾರು ಸುರಂಗವನ್ನು ಕೊರೆದವರು?" ಗವರ್ನರ್ ಕೇಳಿದ. ಆಗ ಅಕ್ಸೆನೋವ್ ಒಮ್ಮೆ ಸೆಮನಿಚ್ಚನನ್ನು ನೋಡಿ ಹೀಗೆಂದನು:

"ದೊರೆಯೇ, ನಾನು ಹೇಳಲಾರೆ. ನಾನು ಹೇಳುವುದು ದೇವರ ಇಚ್ಛೆಯಿಲ್ಲ! ನೀವು ನನ್ನನ್ನು ಏನು ಬೇಕಾದರೂ ಮಾಡಬಹುದು."

ಗವರ್ನರ್ ಎಷ್ಟು ಪ್ರಯತ್ನಪಟ್ಟರೂ, ಅಕ್ಸೆನೋವನು ಹೇಳಲಿಲ್ಲ. ಅದ್ದ ರಿಂದ ಆ ವಿಚಾರವನ್ನು ಅಲ್ಲಿಯೇ ಬಿಡಬೇಕಾಯಿತು.

ಆ ರಾತ್ರಿ ಅಕ್ಸೆನೋವನು ತನ್ನ ಹಾಸಿಗೆಯಲ್ಲಿ ಮಲಗಿಕೊಂಡಿದ್ದನು. ನಿದ್ರೆ ಇನ್ನೂ ಬಂದಿರಲಿಲ್ಲ. ಯಾವನೋ ಒಬ್ಬ ಕೈದಿಯು ಬಂದು ಆತನ ಹಾಸಿಗೆಯ ಬದಿಯಲ್ಲಿ ಕುಳಿತುಕೊಂಡನು. ಆತನು ಸೆಮುನಿಚ್ಚನೆಂದು ತಿಳಿಯಿತು.

"ನನ್ನಿಂದ ನಿನಗೆ ಇನ್ನೇನಾಗಬೇಕು? ಇಲ್ಲಿಗೆ ಯಾಕೆ ಬಂದಿರುವಿ?" ಅಕ್ಸೆ ನೋವ್ ಕೇಳಿದ. ಸೆಮೆನಿಚ್ಚನು ಮೌನವಾಗಿಯೇ ಇದ್ದನು.

"ನಿನಗೇನು ಬೇಕು? ಇಲ್ಲಿಂದ ಹೋಗು. ಇಲ್ಲದಿದ್ದರೆ ಅಧಿಕಾರಿಯನ್ನು ಕರೆಯುವೆನು''—ಅಕ್ಸೆನೋವ್ ಹೇಳಿದ.

ಸೆಮುನಿಚ್ಚನು ಅಕ್ಸೆನೋವಿನ ಹತ್ತಿರಕ್ಕೆ ಬಾಗಿ "ದಯವಾಡಿ ನನ್ನನ್ನು ಕ್ಷಮಿಸು" ಎಂದನು.

''ಯಾತಕ್ಕಾಗಿ?" ಅಕ್ಸೆನೋವ್ ಕೇಳಿದ.

ಸೆಮುನಿಚ್: ''ಅಂದು ಆ ವ್ಯಾಪಾರಿಯನ್ನು ಕೊಂದು ಚೂರಿಯನ್ನು ನಿನ್ನ ಚೀಲದಲ್ಲಿ ಅಡಗಿಸಿಟ್ಟವನು ನಾನೇ. ನಿನ್ನನ್ನು ಕೊಲೆ ಮಾಡಬೇಕೆಂಬ ಉದ್ದೇಶ ನನಗಿತ್ತು. ಆದರೆ ಅಷ್ಟರಲ್ಲಿ ಏನೋ ಶಬ್ದ ಕೇಳಿಬಂತು. ಕೂಡಲೇ ಚೂರಿ ಯನ್ನಡಗಿಸಿಟ್ಟು ಕಿಟಕಿಯ ಮೂಲಕ ನಾನು ಪರಾರಿಯಾದೆ.

ಅಕ್ಸೆನೋವ್‌ಗೆ ಏನು ಹೇಳಬೇಕೆಂದು ತೋಚಲಿಲ್ಲ. ಆದರೆ ಸೆಮೆನಿಚ್ಚನು ಮೊಣಕಾಲನ್ನೂರಿಕೊಂಡು ಪುನಃ ಪುನಃ ಕ್ಷಮೆ ಬೇಡಿದನು.

"ನಾನು ನನ್ನ ಅಪರಾಧವನ್ನು ಒಪ್ಪಿಕೊಳ್ಳುವೆನು. ಆಗ ನಿನ್ನ ಬಿಡುಗಡೆ ಯಾದೀತು. ನೀನು ನಿನ್ನ ಮನೆಗೆ ಹೋಗಬಹುದು" ಸೆಮೆನಿಚ್ ಹೇಳಿದನು. ದುಃಖಿತನಾದ ಆಕ್ಸೆನೋವ್"ನನಗಿನ್ನೆಲ್ಲಿಯ ಮನೆ! ನಿನಗೆ ಹೇಳುವುದಕ್ಕೆ ಸುಲಭ. ಆದರೆ ನಿನಗಾಗಿ ಇಪ್ಪತ್ತಾರು ವರ್ಷಗಳ ಕಾಲ ನಾನಿಲ್ಲಿ ಕಷ್ಟವನ್ನನುಭವಿಸಿದೆ. ಈಗ ನಾನೆಲ್ಲಿ ಹೋಗಲಿ?....ನನ್ನ ಹೆಂಡತಿ ಎಂದೋ ಮಡಿದಿರುವಳು...ನನ್ನ ಮಕ್ಕಳು ನನ್ನನ್ನು ಮರೆತಿರುವರು...ನನಗೆ ಹೋಗುವುದಕ್ಕೆ ಇನ್ನೆಲ್ಲಿಯ ಸ್ಥಳ ಇದೆ?''...

ಆದರೆ ಸೆಮೆನಿಚ್ಚನು ಕದಲಲಿಲ್ಲ. ತನ್ನ ತಲೆಯನ್ನು ನೆಲಕ್ಕೆ ಬಡಿದು ಕೊಂಡನು. ದಯಮಾಡಿ ತನ್ನನ್ನು ಕ್ಷಮಿಸು ಎಂದು ಕೂಗಿದನು.-

ಸೆಮುನಿಚ್: ''ಅಧಿಕಾರಿಗಳು ನನ್ನನ್ನು ಬಲವಾಗಿ ಬಡಿದಾಗಲೂ ಕೂಡಾ ನಿನ್ನನ್ನು ಈಗ ನೋಡುವಾಗ ಆಗುವಷ್ಟು ನೋವಾಗಿಲ್ಲ... ನೀನೆಷ್ಟು ದಯಾಮ ಯನು! ನಾನು ನಿನಗೆಷ್ಟು ಅನ್ಯಾಯ ಮಾಡಿದ್ದರೂ ನೀನು ನನ್ನಲ್ಲಿ ಕರುಣೆ ತೋರಿ ರುವಿ. ನಾನು ನಿಜವಾಗಿಯೂ ನೀಚ. ದಯಮಾಡಿ ನನ್ನನ್ನು ಕ್ಷಮಿಸಲಾರೆಯಾ?'' ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತನು. ಆತನ ದುಃಖವನ್ನು ನೋಡಿ ಅಕ್ಸೆ

ನೋವ್ ಕೂಡಾ ಅಳುವುದಕ್ಕಾರಂಭಿಸಿದನು. ಅಕ್ಸೆನೋವ್ ‘‘ದೇವರು ನಿನ್ನನ್ನು ಕ್ಷಮಿಸುವನು. ಬಹುಶಃ ನಾನು ನಿನ್ನಿಂದ ನೂರು ಪಾಲು ನೀಚನಾಗಿರಬಹುದು’ ಎಂದನು. ಈ ಮಾತುಗಳನ್ನು ಹೇಳಿದೊಡನೆ ಆತನ ಹೃದಯು ಹಗುರವಾಯಿತು. ಆತನಿಗೆ ಸೆರೆಮನೆಯನ್ನು ಬಿಟ್ಟುಹೋಗುವ ಇಚ್ಛೆ ಇಲ್ಲದಾಯಿತು. ಆದರೆ ತನ್ನ ಅಂತ್ಯದ ದಿನಗಳಿಗಾಗಿ ಹಾತೊರೆದನು.

ಅಕ್ಸೆನೋವ್ ಏನೆಂದರೂ ಸೆಮೆನಿಚ್ಚನು ತನ್ನ ತಪ್ಪನ್ನೊಪ್ಪಿಕೊಂಡನು. ಆದರೆ, ಅಕ್ಸೆನೋವಿನ ಬಿಡುಗಡೆಯ ಆಜ್ಞೆ ತಲಪಿದಾಗ ಆತನು ಇಹಲೋಕದ ಯಾತ್ರೆಯನ್ನು ಮುಗಿಸಿದ್ದನು.

Edited, Printed & Published by K. V. Shenoy
at The Prabhat Printers, Ltd., Mangalore.